Koravanji

ಕೊರವಂಜಿ



ಮೇ ೧೯೫೧

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ರೇವಣ್ಣ

ಶ್ರೀ॥ ಹಾ. ರಾಮು

ಶ್ರೀ॥ ಅಭಿನವ ಶ್ರೀನಿವಾಸ

ಶ್ರೀ॥ ಬೀವೀ

ಶ್ರೀ॥ ಹಾ. ವೆಂ. ರಾಮಸ್ವಾಮಿ

ಶ್ರೀ॥ ಗೋಡಂಬಿ

ಶ್ರೀ॥ ಎ. ಎಸ್. ರಾಮಕೃಷ್ಣ

ಶ್ರೀ॥ ಸತ್ಯವಾದಿ

ಶ್ರೀ॥ ಹೋಸಂಪ

ಶ್ರೀ॥ ಸರೋಜಿನಿ ಆರೂರು


ಶ್ರೀ॥ ಕುಮಾರ್

ಶ್ರೀ॥ ಪಾಟಾಳಿ


ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ:— ಕೇವಲ ನಾಲ್ಕಾಣೆ.




ಮನಮೋಹಕವಾದ ಪರಿಮಳಕ್ಕೆ...
ರಾಜಾ
ಕಸ್ತೂರಿ ಸೋಪು
FEDERAL S-615
MANYAM & CO., BANGALORE, MADRAS, MADURA, BOMBAY...



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತ ಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಕಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ, ಲಿಮಿಟೆಡ್

ಮಲ್ಲೇಶ್ವರಂ : : ಬೆಂಗಳೂರು 3.

ಕೊರವಂಜಿ

ಸಂಪುಟ ೧೦ | ಮೇ ೧೯೫೧ | ಸಂಚಿಕೆ ೨

ಕು ಹ ಕಿ ಡಿ ಗ ಳು

★ ★

ಅವರೇ ಕಟ್ಟಿಸಿದ ಹೊಸಮನೆಗೆ ಹೋದಂದಿನಿಂದ, ನಮ್ಮ ಅಧಿಕಾರಿಯು ಕಛೇರಿಯ ಬಾಗಿಲನ್ನು ಮೆತುವಾಗಿ ಮುಚ್ಚುತ್ತಾರೆ ಎಂದು ನೌಕರರೊಬ್ಬರು ಬರೆದಿದ್ದಾರೆ.

* * *

ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ—ಯಾವ ದೈನಂದಿನ ಪತ್ರಿಕೆ ಅಧಿಕಾರಕ್ಕೆ ಬರುತ್ತದೋ, ಅದನ್ನು ಹೇಳುವುದು ಅಸಾಧ್ಯ.

* * *

ದುಂಡು ಮಲ್ಲಿಗೆ ಕೊಂಡು ಕೊಂಡೆ. ಆದರೆ ಅದಕ್ಕೆ ವಾಸನೆಯೇ ಇರಲಿಲ್ಲ. (ಹೇಳಿಕೆ)

—ಓಹೋ! ರೇಷ್ಮೆ ಅಂಗಡೀಲಿ ಕೊಂಡಿರಬೇಕು.

* * *

ಲೋಕದ ಕಣ್ಣುಗಳೆಲ್ಲಾ ಕೊರಿಯಾ, ಕಾಶ್ಮೀರ, ಅಬಡಾನ್, ಆಟ್ಲೀ ಇವುಗಳ ಮೇಲಿದೆ.

—ಯಾರ ಕಣ್ಣು ಬೀಳದಿರುವಾಗ ನಾವು ಕಾಳಸಂತೇಲಿ ಕೊಳ್ಳೋಣ!

* * *

ಶಾಂತಿ ಸಮಿತಿಯು ಎಲ್ಲಿ ಏರ್ಪಡಿಸಬೇಕು ಅನ್ನುವ ವಿಷಯದಲ್ಲಿ ಯುದ್ಧವೇ ನಡಿಯಿತಂತೆ.

*　　*　　*

"ಮಕಮಲ್ ಟೋಪಿ" ನೋಡಿದೆಯಾ ಅಂತ ಕೇಳಿದರು.

---"ಟೋಪಿ ಮಕಮಲ್‌ದಾಗಲೀ, ಖದ್ದರ್‌ದಾಗಲೀ ಫಲಿತಾಂಶ ಒಂದೇ ಅಂತ ಹೇಳಿದೆ" ಅಂತ ಒಬ್ಬರು ಪತ್ರ ಬರೆದಿದ್ದಾರೆ.

—ಶುದ್ಧ ಕುಹಕ! ಅಂದರೆ ನೀವು ಒಪ್ಪುವುದೇ ಇಲ್ಲ, ಅಲ್ಲವೇ?

*　　*　　*

ಹೊಟ್ಟೆ ಬೆಳೆಸುವುದು ಗಂಡಸಿನ ಲಕ್ಷಣವಲ್ಲ (ಪತ್ರಿಕೆ)

— ಗಾಮನನ್ನು ಕೇಳಿ---ಉತ್ತರ ಹೇಳ್ತಾನೆ.

*　　*　　*

ಕಾಮನ ಬೂದಿ ಕದರುಕ್ಕೆ, ಮಳೆ ಬರದೇ ಇದ್ದರೂ, ಉಗಾದೀಗೆ ಉಗುಳು ನೀರು ಬೀಳದಿದ್ದರೂ, ರೇಷ್ನ ತರಲು ಹೋದವರ ಕಣ್ಣೀರು ಧಾರಾವಾಹಿನಿಯಾಗಿ ಬಿತ್ತಂತೆ.

*　　*　　*

ಕಮ್ಯೂನಿಸ್ಟ್ ಸಂಸ್ಥೆಯವರು ಭಾರತದಲ್ಲಿ ಭೂಗತವಾಗಿಯೇ ಇರುವರು. (ಪತ್ರಿಕೆ)

--- ಅವರಿಗೆ ಹೇಳಿಕಳಿಸಬೇಕು. ನಮ್ಮಮನೆಯಲ್ಲಿರುವ ಚೇಳುಗಳನ್ನು ಹುಡುಕಲು.

*　　*　　*

ಇಂದಿನ ಆಶ್ಚರ್ಯಕರವಾದ ಸುದ್ದಿ.

---ಮಕ್ಕಳ ರೈಲೊಂದನ್ನು ತಂದೆಯು ಅಪಘಾತವಿಲ್ಲದೆ ನಡೆಸಿದನಂತೆ.

*　　*　　*

ಪಂಚೆಗಳ ಅಭಾವ (ಸುದ್ದಿ)

—ಅದಕ್ಕೆ ಸಲಹೋ ಸರ್ಕಾರ, ಷರಾಯಿಗಳ ಮೇಲೆ ಸುಂಕ ಹಾಕಲು ಯೋಚಿಸುತ್ತಿದೆಯಂತೆ.

*　　*　　*

ಜಪಾನ್ ಮತ್ತು ಅಮೇರಿಕಾ+ಅನುನಾಯಿಗಳ ಸಂಧಿ ಇಷ್ಟರಲ್ಲೇ ಆಗುತ್ತದಂತೆ.

---ಜಪಾನರಿಗೆ ಸ್ವಾತಂತ್ರ್ಯ ಮುಖ್ಯ. "ತಾವು ಹರಕಿರಿ ಮಾಡುವ ಮೊದಲೇ ಇತರರಾರೂ ಅವರನ್ನು ಖೂನಿ ಮಾಡಬಾರದು" ಎಂಬುದೇ ಅವರ ಗೀತಾ.

ಉರಿಗಾಳು

ಪ್ರೋಗ್ರಾಮುಸ್ನು ಕೇಳುವತನಕ ಈ ರೇಡಿಯೊ ಸೆಟ್ಟಿಂದ ಷಾಕ್ ಹೊಡೆಯುವ ಭೀತಿಯೇ ಇಲ್ಲ" ಎಂದು ಒಂದು ಜಾಹಿರಾತ್ ಹೇಳುತ್ತದೆ.

*   *   *

"ಮಖಮಲ್ ಟೋಪಿ" ಎಂಬ ನಾಟಕದಿಂದ ಯಾರಿಗೆ ಟೋಪಿ ಬೀಳುತ್ತಿದೆ ಎಂಬುದು ಇನ್ನೂ ಯಾರಿಗೂ ಗೋಚರವಾಗದೆ ಇರುವುದು ಶೋಚನೀಯ ಎಂಬ ಟೀಕೆ ಕೇಳಿಬರುತ್ತಿದೆ.

*   *   *

ಮದುವೆಯಾಗಿ ಮನೆಮಾಡಿಕೊಂಡು ಗೃಹಸ್ಥಾಶ್ರಮದಲ್ಲಿರುವುದಕ್ಕೆ ಯುವಕರನೇಕರು ಹೆದರುತ್ತಿರುವರು (ಭಾಷಣ) ಆದರೆ ಮದುವೆಯಾಗುವತನಕ ನಮಗೆ ಹೆದರಿಕೆ ಎಂದರೆ ಏನೆಂದೇ ತಿಳಿದಿರಲಿಲ್ಲ.

*   *   *

ಕುಣಿತಕ್ಕೂ ದುಡಿತಕ್ಕೂ ವ್ಯತ್ಯಾಸವೇನು ಎಂಬ ಪ್ರಶ್ನೆಗೆ ತಮಿಳು ತಾರೆ ಒಬ್ಬಳು, ತನಗೆ ಗೊತ್ತಿಲ್ಲವೆಂದು ಉತ್ತರ ಹೇಳಿದಳಂತೆ ...ಆಕೆಗೆ ಗೊತ್ತಿಲ್ಲವೆಂದು ನಮಗೆ ಆಗಲೇ ತಿಳಿದಿತ್ತು.

*   *   *

ಆಹಾರ ಮಂತ್ರಿಗಳನ್ನು ನೋಡಬೇಕೆಂದು ಅವರ ಕಚೇರಿಗೆ ಒಬ್ಬರು ಹೋಗಿ ಕೇಳಿದಾಗ ಅವರ ಆಪ್ತ ಕಾರ್ಯದರ್ಶಿ, "ಅವರನ್ನು ನೋಡುವುದಕ್ಕಾಗುವುದಿಲ್ಲ; ಅವರು ಹೆಚ್ಚು ಆಹಾರ ಬೆಳೆಯುತ್ತಿರುವರು" ಎಂದರಂತೆ.

*   *   *

ಕಂಟ್ರೋಲನ್ನು ತೆಗೆಯುದಿದಿದ್ದರೆ, ಮಿಲ್ ಮಾಲೀಕರುಗಳು ಒಂದು ರಾಜಕೀಯ ಪಕ್ಷದ ಪ್ರಚಾರ ನಿಧಿಗೆ ಅಪಾರ ಧನ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿರುವುದಾಗಿ ವದಂತಿ ಹಬ್ಬಿದೆ.

*   *   *

ವೃತ್ತಪತ್ರಿಕೆಗಳಿಗೆ ಕಾಗದದ ಅಭಾವ ತಗುಲಿ ಅವುಗಳ ಆಕಾರ ಚಿಕ್ಕದಾದರೆ, ಮನೆಯೊಳಗೆ ಅವುಗಳನ್ನು ಉಟ್ಟುಕೊಂಡು ತಿರುಗಾಡುವ ಗುಮಾಸ್ತರಿಗೂ ಮೇಷ್ಟರುಗಳಿಗೂ ಬಟ್ಟೆ ಅಭಾವ ತಲೆದೋರುವುದೆಂಬ ಭೀತಿ ಆಡಳಿತ ವರ್ಗದವರಿಗೆ ಉಂಟಾಗಿದೆಯಂತೆ.

*   *   *

ಸುಪ್ರಸಿದ್ಧ ಶಿಕಾರಿ ವಿದಗ್ಧನೊಬ್ಬ ಹುಲಿ ಬಾಲಗಳನ್ನು ಮನೆಯ ಗೋಡೆಯಮೇಲಿರಿಸಿ ಮೆರೆಯುತ್ತಿರುವನಂತೆ....ಉಳಿದ ಭಾಗಗಳನ್ನು ಆಗಲೇ ಇತರ ಶಿಕಾರಿ ವಿದಗ್ಧರು ಕತ್ತರಿಸಿ ತೆಗೆದುಕೊಂಡು ಹೋಗಿರಬಹುದೆಂದು ತೋರುತ್ತದೆ.

*　　*　　*

ಅಶ್ಲೀಲ ಕಾದಂಬರಿಗಳನ್ನು ಮಾರುವ ಕಂಪೆನಿಗಳು ಅವುಗಳ ಬೆಲೆಗೆ ಚೀಟಿಕಳುಹಿಸುವಾಗ, "ಕಾಮನ ಬಿಲ್ಲು" ಎಂಬ ಶಿರೋನಾಮೆಯನ್ನು ಪಯೋಗಿಸಬಹುದೆಂಬ ಸಲಹೆ ಬಂದಿದೆಯಂತೆ.

*　　*　　*

"ನಾನು ಪಾಕಶಾಲೆಯ ಪುತ್ಥಳಿಗಳಲ್ಲ" (ಮಹಿಳಾ ಸಮಾಜದಲ್ಲಿ ಭಾಷಣ) ಅವರ ಅಡಿಗೆ ತಿಂದವರೊಬ್ಬರೂ ಹಾಗೆ ಹೇಳುವುದೇ ಇಲ್ಲ.

*　　*　　*

"ಇನ್ನು ಅರವತ್ತು ವರ್ಷಗಳೊಳಗೆ ಕೂದಲಿಗೆ ವಾಸನಾ ದ್ರವ್ಯಗಳನ್ನು ಹಚ್ಚುವ ಪದ್ಧತಿ ನಿಂತುಹೋಗುತ್ತದೆ" (ಅಮೆರಿಕನ್ ಪತ್ರಿಕೆ) ಅರವತ್ತು ವರ್ಷಗಳ ನಂತರ ನಮ್ಮ ತಲೆಯಮೇಲೆ ಕೂದಲುಳಿಯುವ ಭರವಸೆಯೇ ಇಲ್ಲ, ನಮಗೆ.

*　　*　　*

"ಸಿನಿಮಾ ಹಾಡುಗಳನ್ನು ಪ್ರಚಾರ ಮಾಡಲು ತೊಡಗಿದಾಗಿನಿಂದ, ರೇಡಿಯೋ ಸೆಟ್ಟುಗಳ ಮಾರಾಟ ಇಮ್ಮಡಿಸಿದೆ" (ಎ. ಐ. ಆರ್. ವರದಿ) ಹೌದು! ನಮ್ಮ ಸೆಟ್ಟನ್ನು ನಾವು ಮೊನ್ನೆ ಮಾರಿದೆವು.

*　　*　　*

"ಖಾಲಿ ಸೀಮೆ ಎಣ್ಣೆ ಡಬ್ಬಗಳ ಕಳ್ಳತನ ಬೆಂಗಳೂರಲ್ಲಿ ಈಗ ಹೆಚ್ಚುತ್ತಿದೆ" (ವರದಿ) ಮನೆ ಸಿಗದೆ ತಾಪತ್ರಯ ಪಡುವವರು ಅದರೊಳಗೆ ಸಂಸಾರ ಮಾಡಲು ಯತ್ನಿಸುತ್ತಿರುವರೋ, ಏನೋ?

*　　*　　*

"ರೈಲು ಪ್ರಯಾಣ ಮಾಡುವುದರಿಂದ ನಮ್ಮ ಎದೆ ವಿಶಾಲವಾಗುತದೆ" (ಪತ್ರಿಕೆ) ಮೈ ಕೈ ನೋವು ಹತ್ತಿ ಪಕ್ಕೆ ಎಲುಬುಗಳೇನೋ ಬಾಗಿ ಬೆಂಡಾಗುತ್ತವೆ.

*　　*　　*

"ಅನ್ನವೆಂದರೆ ಏನು?" ಎಂಬ ಪ್ರಶ್ನೆಗೆ, ಹೋಟಲೂಟ ಮಾಡುತ್ತಿರುವ ಒಬ್ಬ ಎಸ್ಸೆಸ್ಸೆಲ್‌ಸಿ ವಿದ್ಯಾರ್ಥಿ, "ಸೌಟಿಗೂ ತಟ್ಟೆಗೂ ಆಗುವ ಸದ್ದು" ಎಂದು ಉತ್ತರ ಬರೆದನಂತೆ.

——o——

ಕೊರವಾವಲೋಕನ

ಮೂರು ಸಾರ್ತಿ ಸೀನಿದ ಕೊರವ, ಒಳಕ್ಕೆ ಬಂದಾಗ ನಾನು "ವಜ್ರಾಯುಸ್ಸು" ಅಂತ ಮಾರ್ದನಿ ನುಡಿದೆ.

"ವಜ್ರಾಯುಸ್ಸಂತೆ! ಶಕುನ ಬೇರೆ ನುಡೀತಿ ನೀನು, ಅದರ ಬದಲು ನಾನು ಈಗ ಕಟ್ಟಿರುವ ಬಾಜಿಯಲ್ಲಿ ಗೆಲ್ಲುತ್ತೇನೆಯೋ ಸೋಲುತ್ತೇನೆಯೋ ಹೇಳು" ಎಂದ ಕೊರವ.

"ಏನು ಬಾಜಿ, ಅದನ್ನು ಹೇಳು ನಂತರ ಗೋಚಾರ ರೀತಿಯಾಗಿ ಹೇಳುತ್ತೇನೆ" ಎಂದೆ.

ಬರೋಡಾ ರಾಜರಿಗೆ ವರ್ಷಕ್ಕೆ ೨೬ ಲಕ್ಷ ತಿರುಗಿ ಸಿಗುಲ್ಲ ಅಂತ ೧೦ ರೂ. ಬಾಜಿ ಕಟ್ಟಿದೀನಿ. ಬರೋಡಾ ರಾಜರಿಗೆ ೨೬ ಲಕ್ಷ ಸಿಕ್ಕರೆ ೧೦ ರೂ. ನಂದು ಹೋಯ್ತು. ಅವರಿಗೆ ೨೬ ಸಿಗದೆ ಇದ್ದರೆ ನನಗೆ ನೂರು ರೂಪಾಯಿ ಸಿಗುತ್ತೆ. ಇದಕ್ಕೆ ಗೋಚಾರ ರೀತಿ ಹೇಳಬೇಡ—ಅಶ್ವಚಾರ ರೀತಿಯಾಗಿ ಹೇಳು" ಎಂದ ಕೊರವ.

"ನಂಗೊತ್ತಿಲ್ಲ" ಅಂದು ಸುಮ್ಮನಾದೆ.

* * *

ಬಲು ಖುಷಿಮೇಲಿದ್ದ, ಕೊರವ ಕ್ಲಬ್ಬಿಗೆ ಬಂದಾಗ. ಬಂದವನೇ "ಎಲ್ಲರಿಗೂ ಏನೇನು ಬೇಕೋ ತೆಗೆದುಕೊಳ್ಳಿರೊ" ಅಂದ.

ಏನಯ್ಯಾ ಸಮಾಚಾರ ಈ ಖುಷಿಗೆ ಎಂದೆ.

"ನಮ್ಮೂರಿನವರು ಅಸ್ಸಾಂ ಸಹಾಯಾರ್ಥವಾಗಿ ವಸ್ತುಪ್ರದರ್ಶನ ನಡೆಸಿ ಹಣ ಶೇಖರಿಸುತ್ತಿದ್ದಾರೆ ಈಗ ಅಸ್ಸಾಂನಲ್ಲಿ ಪ್ರವಾಹದ ಭೀತಿ ಅಂತ ಪ್ರಕಟಿಸಿದ್ದಾರೆ. ನಮ್ಮವರ ಮುಂದಾಲೋಚನೆಗೆ ನಾನು ಬಲು ಖುಷಿ" ಅಂದ.

* * *

ಖಾಲಿ ತಾಟಿನ ಎದುರಿಗೆ ಕುಳಿತಿದ್ದ ಕೊರವನ ಮುಖ ನೋಡಿ, "ಇಂದಿನ ಭಾತಿಗೆ ಇಂಗು ಹೆಚ್ಚಿದ್ದಿರಬೇಕು, ಇಲ್ಲದಿದ್ದರೆ ಇವನ ಮುಖ ಹೀಗೇಕೆ" ಅಂತ ಅನ್ನಿಸಿತು. ಹಾಗೆಯೇ ಕೇಳಿದೆ. ಆಗಂದ ಕೊರವ,

"ಭಾತಿಗೆ ಇಂಗು ಸರಿಯಾಗಿತ್ತು ಆದರೆ, ಈ ಹೆಂಗಸರ ಬುದ್ಧಿ ನೋಡಿ ಇಂಗು ತಿಂದ ಮುಖ ಅಷ್ಟೆ. ಮೊನ್ನೆ ನವ ಪ್ರಾಂತ ನಿರ್ಮಾಣಕ್ಕಾಗಿ ಪ್ರಧಾನ ಸಚಿವರಲ್ಲಿ ನಿಯೋಗ ಗೋಷ್ಠಿ ಹೋದಾಗ, ಸ್ತ್ರೀಮಲೆಯಾಳದವರು ತಮ್ಮ ಪ್ರತಿನಿಧಿಯನ್ನು ಏಕೆ ಕಳಿಸಲಿಲ್ಲ! ಅಂತ ದುಃಖ" ಅಂತ.

—o—

ಸಂಭಾಷಣೆ

೩೦ ವರ್ಷಗಳ ಹಿಂದಿನ ಒಂದು ಗ್ರಂಥವನ್ನು ತೆಗೆದು ಓದಿ. ಆಗಿನ ಬರಹಗಾರರು ಪಾತ್ರವರ್ಗದವರ ಸಂಭಾಷಣೆಯನ್ನು ವಿವರಿಸುವ ರೀತಿ. ಈಗ ನಮಗೆ ವಿಚಿತ್ರವೆನಿಸುವುದು. ಉದಾಹರಣೆಗೆ :

ರಮೇಶ:—ಉಮಾ! ನೀನು ಹೇಳಿದ್ದೆಲ್ಲವೂ ನಿಜ; ಆದರೂ, ನನ್ನ ಅನುಭವದ ಸಾರ ಸರ್ವಸ್ವವನ್ನೂ ನಾನು ನಿನಗೆ ತಿಳಿಸದೆ ಇರಲಾರೆ; ಜಗತ್ತು ಬರ ಬರುತ್ತ ಉತ್ತಮಗೊಳ್ಳುತ್ತಿದೆ ಎಂಬುದನ್ನು ನಿನ್ನಂಥ ತರುಣೀಮಣಿಗಳು ನಂಬುವುದು ಸಹಜವಾದರೂ, ಅದು ನಿನ್ನ ಸರಳ ಹೃದಯವನ್ನು ಸೂಚಿ ಸುತ್ತದೆಯಲ್ಲದೆ ಅನ್ಯಥಾ ಅಲ್ಲ.

ಉಮಾ :—ಹಾ! ರಮೇಶ! ನೀನು ನನಗೆ ಹೇಳುತ್ತಿರುವ ಉಪದೇಶದ ಮಾತು ಗಳೂ, ಎಚ್ಚರಿಕೆಯ ಸಲಹೆಗಳೂ ಅಮೂಲ್ಯವಾದವೆಂಬುದನ್ನು ನಾನು ಒಪ್ಪಿದರೂ, ಇಕೋ! ಇಲ್ಲೇ ಕುಳಿತಿರುವ ನನ್ನ ತಾಯಿ ನಮ್ಮ ನಿಮ್ಮ ನವ ಬಾಂಧವ್ಯಕ್ಕೆ ತನ್ನ ಪೂರ್ಣ ಸಮ್ಮತಿಯನ್ನು ದಯಪಾಲಿಸುವವರೆಗೂ ನಾನು ನಿನ್ನೊಂದಿಗೆ ಮುಖವೆತ್ತಿ ಸಂಭಾಷಣೆ ಮಾಡಲಾರೆ ಎಂಬುದು ನೆನಪಿರಲಿ.

ಸರೋಜಾದೇವಿ :—ಉಮಾ! ನನ್ನ ಪುತ್ರೀ ರತ್ನವೇ! ಹಾ! ರಮೇಶ! ನನ್ನ ಅಣ್ಣ ದಿಲೀಪನ ಏಕಮಾತ್ರ ಪುತ್ರಮಾಣಿಕ್ಯನೇ! ಬನ್ನಿ! ನೀವಿಬ್ಬರೂ ನನ್ನ ವಾಮಭಾಗ ನನ್ನ ದಕ್ಷಿಣ ಭಾಗಗಳಲ್ಲಿ ಆಸನಸ್ಥರಾಗಿರಿ; ನಿಮ್ಮೊಂ ದಿಗೆ ಬಹು ದಿನಗಳಿಂದಲೂ ನಾನು ನನ್ನ ಹೃದಯ ಮಂದಿರದ ಬಾಗಿ ಲನ್ನು ತೆರೆದು ಒಳಗಿನ ಘಂಟಾಘೋಷವನ್ನು ತೆರೆದು ಮಾರ್ದನಿ ಕೊಡಿಸ ಬೇಕೆಂದು ಕಾತುರಳಾಗಿದ್ದೆ.

ಇಂಥ ಬರೆವಣಿಗೆಗೆ ನಾವು ತಲೆದೂಗಿದ್ದುಂಟು. ೧೦ ವರ್ಷಗಳ ಹಿಂದೆ ಈ ಶೈಲಿಗೆ ಕ್ರಾಂತಿ ತಗುಲಿ, ಎರಡನೆಯರೀತಿ ಅವತರಿಸಿತು. ಉದಾಹರಣೆಗೆ:

ರಮೇಶ, ಚಕಿತನಾಗಿ, ಉಮಾಳನ್ನೇ ತನ್ನ ಒಕ್ಕಣ್ಣಿನ ಒಂದೇ ಮೂಲೆಯಿಂದ ದಿಟ್ಟಿಸಿ, “ಅದು ಸರಿ! ಆದರೆ, ನನ್ನದೂ ಒಂದು ಮಾತಿದೆ” ಎಂದು

ಹೇಳುತ್ತ, ಅವಳ ಹತ್ತಿರ ಸರಿದು, "ನೀನು ಇನ್ನೂ ಹುಡುಗಿ, ಹಸುಳೆ, ಆಶಾವಾದಿ, ಏನೂ ಅರಿಯದ ಹಸುಗೂಸು" ಎಂದು ನಕ್ಕನು. ಆ ನಗೆಯ ಹಿಂದೆ ತಿರಸ್ಕಾರದ ಹೊಗೆಯೂ ಇತ್ತು.

ಆಗ, ಉಮಾ, ನಿಟ್ಟುಸಿರು ಬಿಡುತ್ತ, ರಮೇಶನನ್ನು ನಿಲ್ಲಿಸಿ, "ಸಾಕು, ಸಾಕು! ನಿನ್ನ ಲಲ್ಲಿಯ ಮಾತು! ಅಮ್ಮ ಇಲ್ಲೇ ಕೂತಿರುವುದನ್ನು ಮರೆಯಬೇಡ" ಎಂದು ಎಚ್ಚರಿಕೆ ಇತ್ತಳು. "ಜಾಣ ಹುಡುಗಿ" ಎಂದೆನಿಸಿತು, ರಮೇಶನಿಗೆ.

ಇದನ್ನು ಕೇಳಿದಾಗ, ಸರೋಜಾದೇವಿ ಕಣ್ಣು ತೆರೆದಳು; ಮೆಲ್ಲಗೆ ಆಕಳಿಸಿದಳು. ಆಕೆಯ ಬಾಯಿಂದ ಮಾತು ಹೊರಟಿತು. ಎರಡು ಕೈಗಳನ್ನೂ ಬೀಸಿ ಆಕೆ ಅವರಿಬ್ಬರನ್ನೂ ಕರೆದು, ತನ್ನ ಎಡಬಲಗಳಲ್ಲಿ ಕೂರುವಂತೆ ಸನ್ನೆ ಮಾಡುತ್ತ, "ಬನ್ನಿ" ಎಂದಳು. "ನಿಮ್ಮೊಂದಿಗೆ ಎರಡು ಮಾತಿದೆ" ಎಂದು ಉಸುರಿದಳು.

೫ ವರ್ಷಗಳಿಂದಲೂ ಮೂರನೆಯ ರೀತಿ ಮತ್ತೊಂದು ತಲೆ ಎತ್ತಿದೆ. ಉದಾಹರಣೆಗೆ:

"ಅದು ಸರಿ! ಆದರೆ, ನೀನು ಶುದ್ಧ ಹಸುಗೂಸು", ಎಂದು ರಮೇಶ ಚಕಿತಿಸಿದ. ನಕ್ಕು; ನಕ್ಕು ಉಮಳನ್ನು ಚುಚ್ಚಿದ.

"ಸಾಕು ನಿಮ್ಮ ಲಲ್ಲಿ" ಎಂದು ಉಮಾ ನಿಟ್ಟುಸಿಡಿದಳು; ಅಮ್ಮನಕಡೆ ಬೆರಳಿಸಿದಳು, ಅರೆಬಿರದ ಭಯದಿಂದ.

ಆಗ ಅಮ್ಮ ಆಕಳಿಸುತ್ತ ಕಣ್ದೆರೆದಳು. "ಬನ್ನಿ" ಎಂದಳು, ಆಹ್ವಾನಿಸುತ್ತ. "ಕುಕ್ಕರಿಸಿ" ಎಂದಳು; ಅದೊಂದು ಆಜ್ಞೆಯಾಗಿತ್ತು. ಸುಗ್ರೀವನ ಅಜ್ಞೆಯಂತಿತ್ತು. "ಎಡ, ಬಲ" ಎಂದು ದಿಗ್ದರ್ಶನ ಮಾಡಿಸಿದಳು. ಅವಳ ಅಂತರಂಗ ಯಾವುದನ್ನೋ ಹೊರಗೆಡಹಲು ತಳಮಳಿಸಿತ್ತು.

ಮೊನ್ನೆ ಮೊನ್ನೆ ನಾಲ್ಕನೆಯ ರೀತಿ ಒಂದು ಆವಿರ್ಭವಿಸಿದೆ. ಅದರಲ್ಲಿ ನೈಜತೆ ಇದೆ; ಸಾಮಾನ್ಯವಾಗಿ, ನಾವು ನಮ್ಮ ಮನೆಗಳಲ್ಲಿ ಮಾತಾಡುವಾಗ ಅನುಸರಿಸಿರುವ ರೀತಿಯನ್ನೇ ಕೊಂಚವೂ ಮಾರ್ಪಡಿಸದೆ ಈ ರೀತಿಯಲ್ಲಿ ಇಳಿಸಲಾಗುವುದು. ತರುಣ ಸಾಹಿತಿಗಳಿಗಾಗಿ ಅದರ ಉದಾಹರಣೆಯನ್ನು ಇಲ್ಲಿ ಕೊಡಲಾಗಿದೆ.

"ಅದು ಸರಿ" ಎಂದ ರಮೇಶ. "ಯಾವುದು ಸರಿ?" ಎಂದಳು ಉಮಾ. "ನನಗೊಂದೂ ಬೇಕಿಲ್ಲ" ಎಂದಳು ಉಮಾಳ ತಾಯಿ, ಸರೋಜ.

"ಬೇಕಿಲ್ಲ ಎಂದರೆ ಬಿಡೋರು ಯಾರು" ಎಂದು ರಮೇಶ, ಅಲ್ಲ ರಮೂ!

"ಸರಿಯೋ ತಪ್ಪೋ ಅಂತೂ ..." ಅಂತೂ ಉಮಾಳ ಅರ್ಧ ಮಾತು

"ಬೇಕಾದ್ದಿಲ್ಲ ಸರಿ, ಬೇಡದೆ ಇದ್ದದ್ದು..." —ಯಾರು ಹೇಳಿದರೋ ತಿಳಿಯದು.

"ಬೇಡದೆ ಇದ್ದರೆ ಯಾವುದೂ ಸಿಗುವಂತಿಲ್ಲ" - ಕುರ್ಚಿ ಹೇಳಿತು.

"ನಿನ್ನನ್ನ ಬೇಡಿ ಬೇಡಿ ಬೇಜಾರಾಗಿದೆ"—ಮಂಚದ ಮೇಲಿಂದ ಬಂದ ಹೇಳಿಕೆ.

"ಯಾರಿಗೆ, ನನಗೋ ನಿಮಗೋ" ಉಮಾಳ ಪ್ರಶ್ನೆ.

"ಹಸುಗೂಸು"—ರಮೇಶನ ಉತ್ತರ.

"ಹಗಲುಗನಸು"— ಸರೋಜಳ ಟೀಕೆ.

"ಹಗಲುಗನಸು ಎಂದರೆ ಏನು ಅರ್ಥ; ನಿಮ್ಮ ಅರ್ಥ ನನಗೆ ಗೊತ್ತಾಗೋದಿಲ್ಲ"—ಎಲ್ಲಿಂದಲೋ ಕೇಳಿಬಂದ ಟೀಕೆ.

"ಒಳ್ಳೇದೇ ಆಯಿತು"—ರಮೇಶನ ಹೇಳಿಕೆ.

"ಸುಮ್ಮನೆ ಮತ್ತೆ ನಿದ್ದೆಮಾಡಿ"—ಮಗಳ ಸಲಹೆ.

"ನಿದ್ದೆ ಎಲ್ಲಿಂದ ಬಂತು"—ತಾಯಿಯ ಕುಹಕ.

"ಹೆತ್ತವರಿಗೆ ಹೆಗ್ಗಣ ಮುದ್ದು"— ಸರೋಜಾಬಾಯಿ ಸಮಾಧಾನ.

"ಬರಬರುತ್ತ ಹೆಗ್ಗಣಗಳು ಹೆಚ್ಚಿಹೋಯ್ತು"—ಮುಂದಿನ ಅಳಿಯನ ಇಂದಿನ ಚಿಂತೆ.

"ಧಾನ್ಯ ಶೇಖರಣೆ ಮಾಡಿದರೆ ಹೆಗ್ಗಣ"—ಅಮ್ಮನ ಅನುಭವ.

"ಅದಕ್ಕೇ ರೂಪಾಯಿಗೆ ಒಂದು ಸೇರು ಅಕ್ಕಿ"—ಉಮಾಳ ವ್ಯಾಖ್ಯಾನ.

"ಆದರೂ ನಿಮ್ಮಮ್ಮ ಎಷ್ಟು ದಪ್ಪ, ೨೫೦ ಪೌಂಡ್ ತೂಕ!"—ರಮೂ ಹೇಳಿಕೆ.

"ನೀನು ಏನು ಕಡಮೆ ಇಲ್ಲ"— ಉಮಾಳ ಟೀಕೆ.


ಇತ್ಯಾದಿ........ಇತ್ಯಾದಿ.

— o —

ರೋಷ ಪದಗಳು

ಹೊಟ್ಟೆಹೊರೆಯುವ ನರಗೆ
ಬಟ್ಟೆ ಕೊಳ್ಳುವ ಚಿಂತೆ
ಬಟ್ಟೆ ಕೊಳ್ಳುವ ನರಗೆ
ಹೊಟ್ಟೆಹೊರೆಯುವ ಚಿಂತೆ.
ಈ ಕಷ್ಟ ಕಾರ್ಪಣ್ಯಗಳ ಜಯಿಸಿ
ಅಟ್ಟಹಾಸದಿ ಮೆರೆವ ಭೂಪರು
ಕಟ್ಟಕಡೆಗೆ
ಹಿಟ್ಟಿಲ್ಲದಾನರಕಕ್ಕೆ ಪೋಗುವರೊ ॥ ಸರ್ವಜ್ಞ ॥

—(ಸತ್ಯವಾದಿ)



ಯಾಕೋ ! ಅಷ್ಟು ಯೋಚನೆಮಾಡ್ತಿ ? ಮೆಕಾರ್ಥರ್ ಹೋದರೆ ಯುದ್ಧ ನಿಂತು ಹೋಗುತ್ತೆಯೇನೋ !

ಯುದ್ಧ ಆಗೇ ಆಗುತ್ತೆ ! ನಿಂಗೆ ಕೆಲಸ ಸಿಕ್ಕೇ ಸಿಗುತ್ತೆ. ನಾನು ಕಂಟ್ರಾಕ್ಟ್ ಹಿಡಿದೇ ಹಿಡೀತೇನೆ—ಹೆದರಬೇಡವೋ !

ಶೇಖರಣ ಕ್ರಮ

ಯಾವ ಮುನಿಸಿಪಾಲಿಟಿಗಾಗಲಿ, ಸಂಸ್ಥೆಗಾಗಲಿ, ರಾಜಕೀಯ ಪಕ್ಷಕ್ಕಾಗಲಿ, ಕ್ರೀಡಾ ಸಂಸ್ಥೆಗಾಗಲೀ, ನಿಧಿ ಶೇಖರಿಸಲು ಒಂದು ಹೊಸ ವಿಧಾನವನ್ನು ಈಗ ಧೈರ್ಯವಾಗಿ ಹೇಳಿಕೊಡಬಹುದು, ಅನುಭವಸಿದ್ಧವಾದ ಉಪಾಯವಿದು.

ಒಂದು ವಸ್ತುಪ್ರದರ್ಶನ ಏರ್ಪಡಿಸಿ ಒಳಗೆ ವಸ್ತುಗಳೇನೂ ಇರಬೇಕಾದ್ದಿಲ್ಲ. ಸುತ್ತ ತಟ್ಟಿಗೆ ಗೋಡೆ ಎಬ್ಬಿಸಿ, ನಾಲ್ಕಾರು ಕಡೆ ನಾಲ್ಕಾಣೆ ಅಥವಾ ಎಂಟಾಣೆ ಟಿಕೀಟುಗಳನ್ನು ಮಾರಿ. ಹೆಂಗಸರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಕೂಡದು. ವ್ಹಾಲಂಟಿಯರುಗಳನ್ನೂ ವ್ಹಾಲಂಟೀರಿಣಿಗಳನ್ನೂ ಗೊತ್ತುಪಡಿಸಿ ಕಾಫಿ ಕುಡಿಸಿ, ನಗುನಗುತ್ತಾ ಬಾಗಿಲಲ್ಲಿ ನಿಲ್ಲಿಸಿ. ಜನ ಒಳಗೆ ನುಗ್ಗಿ, ಏನೂ ಇಲ್ಲ ಅಂತ ಪತ್ತೆ ಹಚ್ಚಿ, ಅದನ್ನು ಯಾರಿಗೂ ಹೇಳದೆ, ಅವರೂ ಪೆಚ್ಚುಮೋರೆ, ಹಾಕಲಿ ಎಂಬ ಉದ್ದೇಶದಿಂದ, ಪ್ರದರ್ಶನ ಅತ್ಯುತ್ತಮವಾಗಿದೆ ಎಂದು ಅಪಪ್ರಚಾರಮಾಡಿ ಮತ್ತಷ್ಟು ಜನರನ್ನು ಮೋಸಗೊಳಿಸುವರು. ಸಾಧ್ಯವಾದರೆ, ಮೋಸಹೋದವರ ಸಂಖ್ಯೆಯನ್ನು ದಿನವೂ ಪ್ರಕಟಿಸಿ. ಆಗ, ತಾವೂ ಆ ಸಂಖ್ಯೆಯೊಳಗೆ ಸೇರಬೇಕೆಂಬ ಆಸೆಯಿಂದ ಆಬಾಲವೃದ್ಧ ಗೋಪಾಳ ಗೃಧ್ರಗಳೆಲ್ಲ ಕಾಸುತೆತ್ತೇ ತೆರುವರು.

ಕೈಗಾರಿಕಾ ಪ್ರದರ್ಶನವೆಂದು ಹೇಳಿ, ಜೇಬು ಕತ್ತರಿಸುವ ಕೈಗಾರಿಕಾ, ಟೋಪಿ ಹ್ಕೊಲೆಯುವ ಕೈಗಾರಿಕೆ, ಕೈ ಕೊಡುವ ಕೈಗಾರಿಕೆ, ವಪನ ಚಾತುರ್ಯ, ಬರೀ ಕೈಲಿ ಮೊಳ ಹಾಕುವ ವಿದ್ಯೆ, ಬೆರಳು ತೋರಿಸಿದರೆ ಹಸ್ತ ನುಂಗುವ ಚಮತ್ಕಾರ, ಅಂಗೈ ಹುಣ್ಣಿಗೆ ಕನ್ನಡಿ ಹಿಡಿಯುವ ತಂತ್ರ. ಕಾಸು ಕೊಟ್ಟರೆ ಕೈಲಾಸ ತೋರುವ ಜಾಣತನ—ಇವೆಲ್ಲವನ್ನೂ ಪ್ರದರ್ಶಿಸಿ.

ಬಳೆ ರಿಬ್ಬನ್ ಅಂಗಡಿಗಳನ್ನಿಟ್ಟರೆ, ಮಹಿಳೆಯರು ಬರುವರು; ಮಿಠಾಯಿ ಅಂಗಡಿಗಳನ್ನಿರಿಸಿದರೆ, ಮಕ್ಕಳು ಅಲ್ಲೇ ಮುತ್ತುವರು; ಡ್ಯಾನ್ಸಿಂಗ್ ಕೈಗಾರಿಕೆ, ಕುಸ್ತಿ ಕೈಗಾರಿಕೆ, ಇವುಗಳನ್ನಿಟ್ಟರೆ, ನೂಕುನೂಕು ಕೈಗಾರಿಕೆ ತಾನಾಗಿಯೇ ಅಭಿವೃದ್ಧಿಯಾಗುವುದು. ನಾಲ್ಕು ಜನ ಬರುತ್ತಾರೆ ಅಂದರೆ, ಅವರನ್ನ ನೋಡಿ ಕೀಟಲೆ ಮಾಡುವುದಕ್ಕೆ ಐದನೆಯವನೊಬ್ಬ ಬಂದೇ ಬರ್ತಾನೆ. ಅವನ ಹಿಂದೆ, ಆರನೆಯವನೂ ಸಿದ್ಧ.

ಅಂತು, ಕೂಸಿಗೆ ಕೂಸು; ಕಾಸಿಗೆ ಕಾಸು.

—ರೇವಣ್ಣ.

ಸಭೆ ಕೂಡಿಸುವಮಾರ್ಗ

ಕಿಟ್ಟಿ ಸಭೆ ಸಮ್ಮೇಳನ ಏರ್ಪಡಿಸುವುದರಲ್ಲಿ ನಿಸ್ಸಿಮನೆನಿಸಿಕೊಂಡಿದ್ದ. ನಮ್ಮೂರಿಗೆ ಯಾವ ಭಾಷಣಕಾರನಾಗಲೀ ಸ್ವಾಮೀಜಿಯವರಾಗಲೀ, ಸಂಗೀತಗಾರನಾಗಲೀ, ದಾಸಸಾಹಿತ್ಯಬೋಧಕನಾಗಲೀ ಒಟ್ಟಾರೆ ನಾಲ್ಕು ಜನರ ಮುಂದೆ ನಿಲ್ಲುವ ಹವ್ಯಾಸವಿರುವ ಯಾವನೇ ಬಂದರೂ ಕಿಟ್ಟಿಯನ್ನೇ ಮರೆಹೋಗಬೇಕಿತ್ತು. ಆತನ ಮುಂದಾಳುತನವಿಲ್ಲದ ಸಭೆ ಸಭೆಯೇ ಅಲ್ಲ ಎನ್ನುವಷ್ಟು ಮಟ್ಟಿಗೆ ನಮ್ಮೂರಿನಲ್ಲಿ ಪ್ರಚಾರವಾಗಿತ್ತು. ಕಳೆದವರುಷ ನೇರವಾಗೇ ಸಭೆ ಕೂಡಿಸಿ ಭಾಷಣಮಾಡಿಯೇ ಮಾಡುತ್ತೇನೆ ಎಂದುಕೊಂಡು ಬಂದ ದೇಶಭಕ್ತ ಮಂಗಳರಾಯರು ಮರಗಿಡಗಳನ್ನೂ, ಕುರ್ಚಿ ಬೆಂಚುಗಳನ್ನೂ ಎದುರಿಸಬೇಕಾದ ಪ್ರಸಂಗ ಬಂದದ್ದು ನಮ್ಮೂರಿನಲ್ಲಿ ಎಲ್ಲರಿಗೂ ತಿಳಿದಿತ್ತು. ಏಕೆ ನಮ್ಮೂರಿನ ಪವಿತ್ರ ಮಂಡಳಿಯವರು ನಾಟಕ ಆಡಿದಾದ ಪಾತ್ರಧಾರರ ಪತ್ನಿಯರು, ಪುತ್ರರೂ, ವಿನಃ ಮತ್ತಾರೂ ಬಂದಿರಲಿಲ್ಲವೆಂದ ಬಳಿಕ ಕಿಟ್ಟಿಯ ಯೋಗ್ಯತೆಯನ್ನು ಉದಾಸೀನಮಾಡಲು ಶಕ್ಯವೇ ಇಲ್ಲ.

ಆದಕಾರಣದಿಂದಲೇ ಈ ವರುಷ ಅವನನ್ನು ಸಂಸ್ಕೃತಿ ಸಂಘದ ಕಾರ್ಯದರ್ಶಿಯನ್ನಾಗಿ ಮಾಡಿದ್ದರು.

ಮೊದಮೊದಲು "ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ" ಎಂದು ಅಚ್ಚುಹಾಕಿಸಿ ನಾಲ್ಕಾರು ಮೀಟಿಂಗಿಗೆ ಜನ ಸೇರಿಸಿದ್ದ. ಆದರೆ ಕೇವಲ ಸ್ಥಳ ಕಾದಿರಿಸಿದ್ದು, ಅದನ್ನು ಆಕ್ರಮಿಸುವವರು ಯಾರೂ ಇಲ್ಲದ್ದನ್ನು ಕಂಡು ಅನೇಕ ಮಹನೀಯರು ಅಸಮಾಧಾನಪಟ್ಟುಕೊಂಡು ಸಭೆಗೆ ಬರುವುದನ್ನೇ ನಿಲ್ಲಿಸಿದ್ದರು.

ಇನ್ನೊಂದು ಸಭೆಯಲ್ಲಿ "ಶ್ರೀ ಗೊರಾ" ಇವರಿಂದ "ಕಲೆಯೋ—ಕೊಲೆಯೋ" ಎಂಬ ಭಾಷಣ. ಕುಮಾರಿ ಮಣಿಕರ್ಣಿಕಾಂಬ ಇವರ ನೃತ್ಯ" ಎಂದು ಹಸ್ತಪತ್ರಿಕೆ ಹಾಕಿಸಿದ. ಆ ಸಭೆಗಂತೂ ನೂಕುನುಗ್ಗಲು ವಿಪರೀತವಾಗಿತ್ತು. "ಶ್ರೀ ಗೋರರು"ರವರ ಭಾಷಣವಾದನಂತರ ಕಿಟ್ಟಿ ಎದ್ದು "ಸಭಿಕರಲ್ಲಿ ಕ್ಷಮಾಪಣೆ ಬೇಡುವೆ. ಕುಮಾರಿ ಮಣಿಯವರು ದೇಹಾಲಸ್ಯದಿಂದ ಬರಲು ಆಗುವುದಿಲ್ಲವೆಂದಿದ್ದಾರೆ. ಮುಂದಿನವಾರ ಶ್ರೀ ಹಾ. ರಾ. ಅವರ ಭಾಷಣದೊಡನೆ ನಿಮಗೆ ನೃತ್ಯವನ್ನು ತೋರಿಸುವೆವು" ಎಂದು ಬಿನ್ನವಿಸಿದ.

ಆ ದಿನ ಕಿಟ್ಟಿಯಮೇಲೆ ಬೈಗಳದ ಸುರಿಮಳೆ ಆದರೂ ಮುಂದಿನ ಮೀಟಿಂಗಿಗೆ ಜನ ಕಡಿಮೆ ಆಗಲಿಲ್ಲ. ಆದರೆ ಆಗಲೂ ಕೇವಲ ಶ್ರೀ ಹಾ ರಾ. ಇವರ ಭಾಷಣದ ಕುಣಿತವನ್ನು ನೋಡಬೇಕಾಯ್ತು. ಕುಮಾರಿ ಮಣಿಯವರು ಅಕಸ್ಮಾತ್ ಮದರಾಸಿಗೆ ಹೋಗಬೇಕಾಯ್ತೆಂಬ ಸುದ್ದಿ ಸಭಿಕರನ್ನು ದಂಗು ಬಡಿಸಿತು. ಬೈಯಲು ಬಾಯಿತೆರೆಯುವ ತಾಳ್ಮೆಯೂ ಅವರಲ್ಲಿ ಉಳಿದಿರಲಿಲ್ಲ

ಇದಾದ ಹದಿನೈದು ದಿನ ಕಿಟ್ಟಿ ಯಾವ ಸಭೆಯನ್ನು ಏರ್ಪಡಿಸಿರಲಿಲ್ಲ. ಇನ್ನು ಈ ನೃತ್ಯದ ಸೋಗು ನಡೆಯುವಂತಿರಲಿಲ್ಲ. ಅಂತೇ ಇಂಟರ್ ಮೀಡಿಯೇಟ್ ಕಾಲೇಜಿನ ಅಧ್ಯಾಪಕರಾದ "ಶ್ರೀ ಚೌಪ"ಯವರನ್ನು ಬೇಡಿ, ಒಂದು ಸ್ಪೆಷಲ್ ಕ್ಲಾಸ್ಅನ್ನು ಸಭೆ ಪ್ರಾರಂಭವಾಗುವ ಹೊತ್ತಿಗೆ ಸರಿಯಾಗಿ ಸಭಾಂಗಣದಲ್ಲಿ ಕರೆಯಬೇಕೆಂದು ಒಪ್ಪಿಸಿದ್ದ. ಈಸಾರಿ ಪಾಠಕೇಳಬೇಕೆಂದು ಬಂದು ನೆರೆದಿದ್ದ ವಿದ್ಯಾರ್ಥಿಗಳಮುಂದೆ "ಅರಣ್ಯಕಾಂಡ"ದ ಕಥಾವಸ್ತುವನ್ನು ಕುರಿತು ಸ್ವಾಮಿ ಧೃಡಾನಂದರ ಶೈಲಿ ಭಾಷಣವನ್ನು ಕುಟ್ಟಿಸಿದ ನಮ್ಮ ಕಿಟ್ಟಿ. ವಿದ್ಯಾರ್ಥಿಗಳು ಹೋಗಲೂ ಆಗದೆ, ಇರಲೂ ಆಗದೆ, ನಿದ್ದೆ ಹೋಗುವವರು ನಿದ್ದೆ ಹೋದರು ಪರಸ್ಪರ ಸಂಭಾಷಣೆಯಲ್ಲಿ ಕೆಲವರು ತೊಡಗಿದರು. ಸಭೆ ಮುಗಿಯುವ ಹೊತ್ತಿಗೆ ಕಾಲೇಜು ಹಾಸ್ಟೆಲ್ ರೀತಿಯಲ್ಲಿ ಆಗಿ ಹೋಗಿತ್ತು.

ಪ್ರೇಕ್ಷಕವರ್ಗ ಒಂದೆರಡು ಸಭೆಯಾಗುವುದರೊಳಗಾಗಿ ನಿರುತ್ಸಾಹರಾಗಿ ಸಭೆಗೆ ಬರುವುದನ್ನೇ ನಿಲ್ಲಿಸಿಬಿಡುತ್ತಿದ್ದರು. ಅದಕ್ಕಾಗಿ ಕಿಟ್ಟಿ ಹೊಸ ಹೊಸ ಮಾರ್ಗ ಅವಲಂಬಿಸಬೇಕಾಗಿತ್ತು.

ಈಚಿನ ಒಂದು ಸಭೆಗೆ ಒಬ್ಬ ಕಾಲೇಜು ತರುಣೀಮಣಿಯನ್ನು ಅಧ್ಯಕ್ಷಸ್ಥಾನಕ್ಕೆ ಕೂರಿಸಿದ. ಅಂದಿನ ಸಭೆಯ ಕಳೆಯನ್ನು ಏನು ಹೇಳಲಿ. ಯೂನಿವರ್ಸಿಟಿ ಯೂನಿಯನ್ ಮೀಟಿಂಗುಗಳಂತೆ ಶೋಭಾಯಮಾನವಾಗಿತ್ತು.


ಕಿಟ್ಟಿಯ ಈ ಯೋಗ್ಯತೆ ಬೆಳೆದಂತೆ ಕಿಟ್ಟಿಯ ಮನಸ್ಸೂ ಬದಲಾವಣೆ ಹೊಂದಿತ್ತು. ನಾನು ಈ ಕೆಲಸಗಳನ್ನೆಲ್ಲಾ ಏಕೆ ಬಿಟ್ಟಿ ಮಾಡಬೇಕು ಎಂದು ಚಿಂತಿಸಿದ—ಅಂತೇ ಒಂದು ಸಭೆ ಏರ್ಪಡಿಸಲು ೫ ರೂ. ಕೊಡಬೇಕು ಎಂದು ನಿಯಮವನ್ನೆ ಮಾಡಿದ. ಹಣವನ್ನು ಭಾಷಣಕಾರ ಕೊಡಬೇಕೆಂದೂ ಸ್ಪಷ್ಟವಾಗಿ ಹೇಳಿಯೇಬಿಟ್ಟ ಇದನ್ನು ಕಂಡ 'ಸಭಾಗೃಹ'ದ ಕಾರ್ಯದರ್ಶಿಗಳು ನಮ್ಮ 'ಹಾಲಿ'ಗೂ ಮೂರು ರೂ. ಕೊಡಬೇಕು ಒಂದೊಂದು ಮೀಟಿಂಗಿಗೆ ಎಂದು ಘೋಷಿಸಿದರು. ಪರಿಣಾಮವಾಗಿ ಮೀಟಿಂಗುಗಳು ಕಡಮೆಯೇನೂ ಆಗಲಿಲ್ಲ. ಆದರೆ ಈಗ ಆಗುತ್ತಿರುವುದೆಲ್ಲಾ ಕೇವಲ ರಾಜಕೀಯ ಸಭೆಗಳು ಮಾತ್ರ. ಜನ ಕೂಡಿಸುವ ಜವಾಬ್ದಾರಿ ಕಿಟ್ಟಿ ಹೊತ್ತೇ ಇದ್ದಾನೆ ಪ್ರೇಕ್ಷಕ

ವರ್ಗದವರನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅವರವರಿಗೆ ಬೇಕಾದ ಪೋಗ್ರಾಂ ಇಡಿಸುತ್ತಾನೆ. ಒಂದು ಭಾಷಣವೆಂದರೆ—ಅದರೊಡನೆ ಬಾಲಂಗೋಚಿಯಂತೆ—ನವತರುಣಿಯರಿಂದ ಒಂದೆರಡು ಸಿನಿಮಾ ಹಾಡು. ಅಥವಾ ನೃತ್ಯ ಇತ್ಯಾದಿ ಕಾರ್ಯಕ್ರಮವಿಟ್ಟು ಜನಸೇರಿಸಿ- ಭಾಷಣವನ್ನು ಅವರ ಕಿವಿಗೆ ತುರುಕಿಸುತ್ತಾನೆ—

ಪರವಾಗಿಲ್ಲ ಕಿಟ್ಟಿ ಇರುವವರೆಗೂ ನಮ್ಮೂರಲ್ಲಿ ಬೇಕಾದಂಥ ಸಭೆ ನಡೆಯುತ್ತಿರುತ್ತೆ.

—ಹಾ. ರಾಮು.

—— ೦ ——



(ಬರೋಡಾ)

ತಪ್ಪೊಪ್ಪುವಿಕೆ

ನಿನ್ನ ಕೈಂಕರ್ಯದಲಿ ತೊಡಗಿಹರ ದಾರಿಯಲಿ
ನಿನ್ನ ಹೆಸರನೆ ಎತ್ತಿ ಅಡ್ಡಿ ಬಂದೆನು, ತಪ್ಪು. ೧

ರೇಸ ನಿಲ್ಲಿಸುವ ಮನ ರೋಸುವಂದದಿ ಮಾಡಿ
ಏಸು ತನ ಹೃದಯವನು ಕಲಕಿದೆನೊ, ತಪ್ಪು. ೨

ಎಲ್ಲೆಡೆಯೊಳಿಹ ನಿನ್ನ, ಬಂಡೆ ಕೊರೆದಂದದಲಿ
ಡಿಲ್ಲಿಯಲಿ ನಿಲ್ಲಿಸಲು ಯೋಚಿಸಿದೆ, ತಪ್ಪು ೩

ಹೇಗಿರಲಿ ರೇಗಿರಲಿ ನಿನ್ನ ಹೆಸರಿನ ಟೋಪಿ
ಮೇಗಡೆಯೆ ಧರಿಸಿದಾ ಮೆರೆದಿರುವೆ, ತಪ್ಪು. ೪

ದುಡಿಯೊ ತಮ್ಮಾ ಎಂದು ನೀನೆಮಗೆ ನುಡಿದರೂ
ತಡಿಯೊ, ಹೊಡಿಯೋ ಲಂಚ, ಎಂದಂದೆ, ತಪ್ಪು ೫

ಎನಿತು ದಶಕ ನೀ ಮದ್ಯ ನಿಲ್ಲಿಸು ಎಂದೆ;
ಮನದಣಿಯೆ ನುಡಿದರೂ, ಕುಡಿಯುತಿಹೆ, ತಪ್ಪು. ೬

ಬಾಳ್ವೆಯೆಷ್ಟವು ಜಗಳ, ನಾ ಮುಂದು ನೀ ಹಿಂದು;
ತಾಳ್ಮೆಯನು ಕಳೆದು ನಾ ಕಾದುವೆನು, ತಪ್ಪು. ೭

—ಅಭಿನವ ಶ್ರೀನಿವಾಸ.

ಬೊಂಬಾಯಿಯ ಭೂಕಂಪ

ಬೊಂಬಾಯಿನಲ್ಲಿ ಏಪ್ರಿಲ್ ೯ ರಂದು ಮೃದುವಾದ ಭೂಕಂಪವಾಯಿತೆಂದೂ, ಮೊದಲು ವರ್ತಮಾನದಪ್ರಕಾರ ಹೆಚ್ಚು ನಷ್ಟಗಳೇನೂ ಸಂಭವಿಸಿಲ್ಲವೆಂದೂ ವರ್ತಮಾನ ಪತ್ರಗಳು ಸಾರಿವೆ. ಆದರೆ ನಮಗೆ ಅನಂತರ ತಿಳಿದು ಬಂದ ವರದಿಗಳ ಪ್ರಕಾರ ನಷ್ಟದವಾರ್ತೆಯಿಲ್ಲದಿದ್ದರೂ, ಬೇರೆ ಆಗುಹೋಗುಗಳ ವೃತ್ತಾಂತ ಮತ್ತು ಕೆಲವರಿಗೆ ಲಾಭವಾದ ಪ್ರಸಂಗಗಳು ಕೂಡ ಹೇರಳವಾಗಿ ಸಿಕ್ಕಿವೆ.

(ಅ) ದಕ್ಷಿಣೋತ್ತರವಾಗಿ ಮಲಗಿದ್ದವರಿಗೆ ತೊಟ್ಟಿಲಲ್ಲಿ ತೂಗಿದಂತೆ ಆಯಿತಂತೆ. ಕಂಪನದ ಗಾಬರಿ ಹೋದಮೇಲೆ ಅವರ ಪೈಕಿ ಅನೇಕರು ತಮ್ಮನ್ನು ಬಾಲ್ಯದಲ್ಲಿ ಸಾಕಿದವರನ್ನು ನೆನೆಸಿಕೊಂಡು ಅತ್ತರಂತೆ.

(ಆ) ನನ್ನ ಸ್ನೇಹಿತನ ಪಕ್ಕದ ಮನೆಯವರು ತಮ್ಮ ಅವಿವಾಹಿತ ಮಗಳಿಗೆ ಸಂಗೀತಪಾಠ ಹೇಳಿಸುತ್ತಿದ್ದರು. ನಾಲ್ಕು ವರ್ಷ ಪಾಠವಾದರೂ ಆಕೆ ಹಾಡಿದಾಗ ಅಪಸ್ವರವೇ ಗಾಳಿಯಲ್ಲಿ ತೇಲುತ್ತಿತ್ತು. ಭೂಕಂಪವಾದ ಮಾರನೇ ದಿನದಿಂದ ಆಕೆಯ ಗಂಟಲು (ಕುಲಕಿದ ಪ್ರಯುಕ್ತ) ಸರಿಯಾಗಿ ಕೂತು, ಆಕೆ ಈಗ ಸುಶ್ರಾವ್ಯವಾಗಿ ಹಾಡುತ್ತಿದ್ದಾರಂತೆ ಆ ಮನೆಯ ಹತ್ತಿರದ ಅಂಗಡಿಯವನಿಗೆ ಸುತ್ತ ಮುತ್ತಲಿನ ಮನೆಗಳ ಜನಗಳಿಂದ ಆಗುತ್ತಿದ್ದ 'ಆಸ್ಪ್ರೋ' ಗುಳಿಗೆಗಳ ವ್ಯಾಪಾರ ನಿಂತುಹೋದರೂ, ಆಕೆಗೆ ವರ ಸಿಕ್ಕುವುದು ಸುಲಭವಾಯಿತೆಂದು ಆಕೆಯ ತಂದೆ ಹರ್ಷಿಸಿದರಂತೆ

(ಇ) ಯಂತ್ರವೊಂದನ್ನು ಕಾರ್ಖಾನೆಯಲ್ಲಿ ಜೋಡಿಸಿದ ಇಂಜನಿಯರೊಬ್ಬರು ತುಂಬಾ ಪೇಚಿಗೆ ಸಿಕ್ಕಿದ್ದರಂತೆ. ನಾಲ್ಕೈದು ಬಾರಿ ಕೆಲಸವನ್ನು ಪುನರಾವರ್ತಿಸಿದರೂ ಆ ಯಂತ್ರವು ತನ್ನ ಪೀಠದಮೇಲೆ ಸರಿಯಾಗಿ ಕೂತಿರಲಿಲ್ಲವಂತೆ ಆಡಿದರೆ ತುಂಬಾ ಅಲುಗಾಟ (Vibration) ಆಗುತ್ತಿದ್ದುದರಿಂದ ಆ ಯಂತ್ರವನ್ನು ಒಂದೇ ಸಮನೆ ಓಡಿಸಲು ಸಾಧ್ಯವಾಗದೇ ಹೋಗಿ, ನಷ್ಟಹೊಂದಿದ್ದ ಕಾರ್ಖಾನೆಯ ಒಡೆಯರು ಕುಪಿತರಾಗಿ ಇಂಜನಿಯರಿಗೆ

ವೇಳೆಯ ಅವಧಿಯನ್ನು ಕೊಟ್ಟಿದ್ದರಂತೆ. ಯಂತ್ರವು ಸರಿಯಾಗಿ ಕೂರದೆ ಹೋಗಲು ಕಾರಣ ಯಂತ್ರದ ಭಾಗಗಳ ವ್ಯತ್ಯಾಸವೋ ಅಥವಾ ಪೀಠವು ಆಕ್ರಮಿಸಿರುವ ನೆಲದ ತಪ್ಪೋ, ಯಾವುದೆಂದು ಗೊತ್ತಾಗದೇ ಇದ್ದ ಆ ಇಂಜನಿಯರು ಭೂಮಿ ಕುಲುಕಿದ ಮಾರನೇ ದಿನ ಏನೋ ಯೋಚಿಸಿ ಆ ಯಂತ್ರವನ್ನು ಓಡಿಸಿ ನೋಡಲಾಗಿ, ಅದು ಸರಿಯಾಗಿ ತನ್ನ ಪೀಠದಲ್ಲಿ ಪ್ರತಿಷ್ಠೆ ಆಗಿರುವುದನ್ನು ಕಂಡರೂ ಆಶ್ಚರ್ಯ ಪಡಲಿಲ್ಲವಂತೆ. ಕಾರ್ಖಾನೆಯ ಮಾಲೀಕರಿಗೂ ತಮಗೂ ಬಂದಿದ್ದ ಭಿನ್ನಾಭಿಪ್ರಾಯವು ಮಾಯವಾಗಲು ಭೂಕಂಪವೇ ಕಾರಣವೆಂದು ಆ ಇಂಜನಿಯರು ಬಸ್ಸಿನ ಕ್ಯೂನಲ್ಲಿ ನಿಂತಾಗ ಪಕ್ಕದವರೊಡನೆ ಹೇಳಿಕೊಂಡರಂತೆ.

(ಈ) ನನ್ನ ಸ್ನೇಹಿತನೊಬ್ಬನಿಗೆ ಮೂಳೆ ಕೂರಿಸುವುದು ಉಪವೃತ್ತಿ. ಕೊನೆಯ ಬಸ್ಸು, ಕೊನೆಯ ರೈಲುಗಳಲ್ಲಿ ಮನೆಯನ್ನು ಸೇರುವವರ ಪೈಕಿ ಕೆಲವರು ಮೂಳೆ ತಿರುಗಿಸಿಕೊಂಡು ಬಂದು ಅವುಗಳ ಕೂರಿಸುವಿಕೆಗಾಗಿ ಮಾರನೇ ದಿನ ನನ್ನ ಸ್ನೇಹಿತನ ಬಳಿ ಬರುತ್ತಿದ್ದರಂತೆ. ಭೂಕಂಪವಾದ ಮಾರನೇ ದಿನ ಅವನ ಹತ್ತಿರ ಒಂದು ಗಿರಾಕಿಯೂ ಸುಳಿಯಲಿಲ್ಲವಂತೆ. ಆ ರಾತ್ರಿ ತಿರುಗಿದ್ದ ಮೂಳೆಗಳು ಭೂಕಂಪದ ಫಲವಾಗಿ ತಮಗೆ ತಾವೇ ತಿರುಗಿ, ಸರಿಯಾಗಿ ಕೂತು ಕೊಂಡಿದ್ದರಿಂದ ಹಾಗಾಯಿತೆಂದು ನನ್ನ ಸ್ನೇಹಿತನ ಮತ.

(ಉ) ಉಪನಗರವೊಂದರಲ್ಲಿ ಒಂದು ಪವಾಡವೇ ನಡೆಯಿತಂತೆ. ಅಲ್ಲಿ ಅನೇಕ ವರ್ಷಗಳಿಂದ ಅಲೆದಾಡುತ್ತಿದ್ದ ಹುಚ್ಚನೊಬ್ಬನಿಗೆ ಭೂಕಂಪವಾದ ಮಾರನೇ ದಿನದಿಂದ ಮೆದುಳು (ಅಲುಗಾಡಿದುದರ ಫಲವಾಗಿ) ಸರಿಹೋಗಿ, ಹುಚ್ಚು ಬಿಟ್ಟು ಎಲ್ಲರಂತೆ ಇದ್ದಾನಂತೆ. ತನ್ನ ಹಿಂದಿನ ವಿದ್ಯಾಭ್ಯಾಸದ ಬಲದಮೇಲೆ ಅವನು ಕೆಲಸವನ್ನು ಒದಗಿಸುವ ಸಂಸ್ಥೆಯ ಬಳಿ ಕಾರಕೂನ ಕೆಲಸಕ್ಕೆ ಅರ್ಜಿ ಗುಜರಾಯಿಸಲು ಕ್ಯೂನಿಂತುದನ್ನು ಕಂಡವರು ಬಂದು ಹೇಳಿದರು.

ಭೂಮಿಯು ಕುಲಕಿದ್ದರಿಂದ ನಷ್ಟವಾಗದೇ ಹೋದರೂ, ಲಾಭವೇ ಆಗಿದೆಯೆಂದು ಮೇಲಿನ ವರದಿಯಿಂದ ಗೊತ್ತಾಗುತ್ತದೆ. ಭೂಕಂಪದ ಅನುಭವವನ್ನು ಪಡೆಯದೆ ಹೋದವರು ಅಶುಭವವನ್ನು ಹೊಂದಲು ಈಗಾದಂತೆ ಪುನಃ ಮೃದುವಾದ ಭೂಕಂಪವಾಗಬೇಕೆಂದು ಬಯಸುವುದು ಸಹಜ ಭೂಕಂಪದಿಂದ ಅನೇಕರಿಗೆ ಮೇಲೆ ನಡೆದಂತೆ ಅನುಕೂಲವಾಗುವುದರಿಂದ, ಆಗಾಗ ಭೂಮಿಯು ಮೃದುವಾಗಿ ಕಂಪಿಸಲಿ ಎಂದು ನಾನು ಆಶಿಸಿದರೆ ನಿಮ್ಮ ಒಪ್ಪಿಗೆಯು ಸಿಕ್ಕುವ ಭರವಸೆಯುಂಟೇ?

— ಬೀವೀ.



ಷೇಕ್ ಅಬ್ದುಲ್ಲಾ :

ನಮಗೂ ಪಾಕಿಸ್ತಾನಕ್ಕೂ ಜಗಳ ಅಂತ ಇದ್ದೆವು
ಈಗ ನೋಡಿದರೆ-ಕಾಶ್ಮೀರದ ಸಮಸ್ಯೆ-
ಅಮೆರಿಕಾಕ್ಕೂ ರಷ್ಯಾಕ್ಕೂ ಸಂಭಂಧಿಸಿದ್ದು ಅಂತ ಕಾಣುತ್ತೆ.

ಗೃಹಮೈತ್ರಿ

ಆ ದಿನ ಬೆಳಿಗ್ಗೆ ಎಡಮಗ್ಗುಲಿನಲ್ಲೇ ಎದ್ದಿದ್ದೆನೆಂದು ಕಾಣುತ್ತೆ.

ಆಕೆ ಬಿಸಿಬಿಸಿಯಾದ ಉಪ್ಪಿಟ್ಟು ತಂದು ಕೊಟ್ಟಾಗ ಬಾಯಿಮುಚ್ಚಿಕೊಂಡು (!) ತಿನ್ನುವಬದಲು, "ಎಣ್ಣೆ ಜಾಸ್ತಿ ಹಾಕಿದ್ದೀಯಲ್ಲೇ, ಸ್ವಲ್ಪ ಉಳಿತಾಯಮಾಡು ಎಂದು ಎಷ್ಟು ಬಡಕೊಂಡರೂ ಒಂದೇ!" ಎಂದು ಹೇಳಿ. ಮುಖದ ನೀರಿಳಿಯುವವರೆಗೂ ಅನ್ನಿಸಿಕೊಂಡುದಾಯಿತು. ಇದೇನೂ ಹೊಸ ಸನ್ನಿವೇಶವಲ್ಲದಿದ್ದರೂ ಮನಸ್ಸಿಗೆ ಬಹಳ ಖೇದವುಂಟಾಯಿತು. "ಏನಾದರೂ ಮಾಡಿಕೊ! ಹಾಳಾಗಿಹೋಗು, ಮಹರಾಯಿತಿ...." ಎಂದು ಹೇಳಿ ತಲೆಯಮೇಲೆ ಕೈಯಿಟ್ಟುಕೊಂಡು ಕುಳಿತೆ.

ಮನಸ್ಸಿನ ಕಸಿವಿಸಿ ಕಡಮೆಯಾದೀತೆಂಬ ಆಸೆಯಿಂದ ರೂಮಿನಲ್ಲಿ ಬಿದ್ದಿದ್ದ ಹಳೆಯ ಮಾಸ ಪತ್ರಿಕೆಯೊಂದನ್ನು ಹಿಡಿದುಕೊಂಡು ಅದರ ಪುಟಗಳನ್ನು ತಿರುವುತ್ತ ಕುಳಿತೆ. ಕೊನೆಯ ಪುಟದಲ್ಲೊಂದು ಕಡೆ 'ಗೃಹ ಮೈತ್ರಿಗೆ ಸುಲಭದಾರಿ' ಎಂಬ ಶೀರ್ಷಿಕೆಯಲ್ಲಿ ಈ ರೀತಿ ಇತ್ತು: ಎಲ್ಲರ ಮನೆಯ ದೋಸೆಯೂ ತೂತೇ. ಎಲ್ಲ ಸಂಸಾರದಲ್ಲೂ ಕಲಹವಿದ್ದೇ ತೀರುವುದು. ಇದರ ಪರಿಹಾರಕ್ಕೆ ಸಾಧಾರಣವಾಗಿ ದಂಡೋಪಾಯಕ್ಕೆ ಶರಣುಹೋಗುತ್ತಾರೆ. ಇದು ಅಸಭ್ಯಮಾರ್ಗ. ಶುದ್ಧ ಒರಟು ಉಪಾಯ. ಆದ್ದರಿಂದ ಈ ಬಗೆಯ ಕಲಹ ನಾಶಕ್ಕೆ ಮನಶ್ಶಾಸ್ತ್ರರೀತ್ಯಾ ಕುಶಲ ಮಾರ್ಗವೊಂದಿದೆ. ಅದೇನೆಂದರೆ ಕಲಹಕ್ಕೆ ಸಂಬಂಧಿಸಿದ ವ್ಯಕ್ತಿದ್ವಯಗಳು ಪರಸ್ಪರ ಗುಣಾವಗುಣಗಳ ನಿಕಟಪರಿಚಯ ಹೊಂದಬೇಕು. ಒಬ್ಬರು ಮತ್ತೊಬ್ಬರ ಮೂರು ಮೂರು ಗುಣಗಳನ್ನೂ ಮೂರು ಮೂರು ಅವಗುಣಗಳನ್ನೂ ಚೀಟಿಗಳ ಮುಖೇನ ಪ್ರತಿನಿತ್ಯವೂ ಅರಿತುಕೊಂಡರೆ ಸಂಸಾರದಲ್ಲಿ ಅತ್ಯಲ್ಪ ಕಾಲದಲ್ಲಿ ಮೈತ್ರಿಯು ಏರ್ಪಡುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ.

ಓದಿದೊಡನೆ ಸಂತೋಷದಿಂದ ಹೊಟ್ಟೆ ತುಂಬಿಹೋಯಿತು. ಆ ಸಂಜೆ ಆಕೆ ಪ್ರಸನ್ನಳಾಗಿರುವ ಸಮಯ ಸಾಧಿಸಿ ನನ್ನ ಯೋಜನೆಯೆಲ್ಲಾ ವಿವರಿಸಿ ಮರುದಿನ ಬೆಳಿಗ್ಗೆ ಚೀಟಿಯನ್ನು ಬರೆದುಕೊಡುವಂತೆ ತಿಳಿಸಿದೆ. ಆಕೆ ಏನೂ ಮಾತಾಡಲಿಲ್ಲ.

ರಾತ್ರಿಯೆಲ್ಲ ಕೂಲಂಕುಷವಾಗಿ ಚಿಂತಿಸಿ ನನ್ನ ಚೀಟಿ ಬರೆದೆ. ಬೆಳಗ್ಗೆ ಅವಳ ಚೀಟಿ ಕೈಗೆ ಬರುವುದೆಂಬ ಕಲ್ಪನೆಯಿಂದ ಮೈಯೆಲ್ಲ ಬೆವರಿತು. ನನ್ನ ದುರ್ಗುಣಗಳೇನೋ, ಸದ್ಗುಣಗಳೇನೋ, ದೇವರೇ ಕಾಪಾಡಬೇಕೆಂದು ಕೊಂಡೆ. ಮತ್ತೊಮ್ಮೆ ನಾನು ಬರೆದಿದ್ದ ಚೀಟಿಯನ್ನು ಅವಲೋಕಿಸಿದೆ.

ಹೆಂಡತಿಯ ಗುಣಗಳು :—

೧. ತೌರುಮನೆಗೆ ಹೋಗಬೇಕೆಂದು ಎಂದೂ ಪೀಡಿಸಿಲ್ಲ.
೨. ಒಡವೆಗಾಗಿ ಬಾಯಿಬಿಡುವುದಿಲ್ಲ.
೩. ರೂಪವತಿ.

ಅವಗುಣಗಳು :—

೧. ಹಾಡಲು ಬರುವುದಿಲ್ಲ.
೨. ಕಸೂತಿಯ ಸಾಮಾನಿಗೆ ಹೇಳದ ದಿನವೇ ಇಲ್ಲ.
೩. ನಾಲಿಗೆ—ತೆಳು ಮತ್ತು ಉದ್ದ.

ಮರುದಿನ ಅವಳ ಚೀಟಿ ನನ್ನ ಪಾಲಿಗೆ ಬಂದು ನಡುಗುವ ಕೈಗಳಿಂದ ಬಿಚ್ಚಿ ನೋಡಿದೆ. ಅವಲಕ್ಷಣ ! ದುರ್ಗುಣಗಳನ್ನೇ ಮೊದಲು ಬರೆದಿದ್ದಾಳೆ.

ಗಂಡನ ದುರ್ಗುಣಗಳು :—

೧. ಹೊತ್ತುಗೊತ್ತಿಗೆ ಸಾಮಾನು ತರಬೇಕೆಂಬ ವಿವೇಕವಿಲ್ಲ.
೨. ನಶ್ಯ ಹಾಕಬೇಡಿ, ಅಸಹ್ಯ, ಎಂದರೂ ಕೇಳುವುದಿಲ್ಲ.
೩. ಕಸೂತಿ ಸಾಮಾನು ತರಲು ಗೋಳಾಡುತ್ತಾರೆ.

[ಇನ್ನೂ ಎಷ್ಟೋ....]

ಗಂಡನ ಗುಣಗಳು :—

೧. ....ಎಷ್ಟು ಯೋಚಿಸಿದರೂ ಒಂದೂ ತೋರುವುದಿಲ್ಲ.

—ಹಾ. ವೆಂ. ರಾಮಸ್ವಾಮಿ.

— o —

ಹೆಂಡತಿಯ ಹೊಡೆಯದ ಕೈ, ಲಂಚಂಗಳ
ಪಡೆಯದ ಕೈ, ಕ್ಯೂನಿಂತು ರೇಷನ್ ಕೊಂಡು ತಾರದಾ ಕೈ ।
ಕರೆದು ಆಫೀಸರ ಮನೆಗೆ ಸತ್ಕರಿಸದಾ ಕೈ,
ಮರಗೈ, ಮರುಳ್ಗೈಗಳಂತೆ, ಚೂಡಾರತ್ನಾ ॥

ಸೀರೆಗಾಗಿ

(ಶ್ರೀ॥ ಪಾರ್ಥರ 'ರಸ್ತಿಗಾಗಿ' ಅನುಕರಣೆ)

ಗಲ್ಲ ಗಲ್ಲ ಸೋಕಿಸೋದು ಸೀರೆಗಾಗಿ—ಅವಳು
ರೀರೀರಿ ಎನ್ನೋದೆಲ್ಲಾ ಸೀರೆಗಾಗಿ—ಕಡೆಗೆ
ಎರಡೇಟು ತಿಂದಾಗ್ಲಂತೂ ತಣ್ಣಗಾಗಿ—ಪಾಪ
ಅಡಿಗೆಮನ್ಯ ಸೇರಬೇಕು, "ಮುನ್ಸಿ"ಯಾಗಿ ॥ ೧ ॥

ಇಡ್ಲಿ, ವಡೆ, ಸಾಂಬಾರು, ಸೀರೆಗಾಗಿ—ಆಗ
'ಏನೆ ಅದು' ಎನ್ನು ತಲೆ ಗಟ್ಟಿಯಾಗಿ—ಎಲ್ಲ
ಗಟ್ಯಾಗಿ ಇರೋ ಸೀರೆ—ಪೂಜೆಗಾಗಿ ! ಹಳೆ
ಸೀರ್ಯೆಲ್ಲಾ ಬಾಗಿನ ಕಂಬಿ—ಪಾತ್ರೆಗಾಗಿ ॥ ೨ ॥


ಲೆದರ್ಬ್ಯಾಗು ಬೀರುತ್ತ—ಜಟ್ಕಗಾಗಿ—ಅವಳು
ಕುಣಿ ಕುಣೀತಾ ನಡ್ಯೋವಾಗ—ಹಿಗ್ಗಿಗಾಗಿ—ಬಾಳೆ
ಸಿಪ್ಪೆಮೇಲ್ಕಾಲ್ಜಾರಿ—ತಗ್ಗಿಬಾಗಿ—ಸೊಂಟ
ಹಿಡಿದಾಗ ಚಪ್ಪಾಳೆ—ಸುಗ್ಗಿಯಾಗಿ ॥ ೩ ॥

ಅಗಲ ಮೊಳ, ವಾಯಿಲ್ ಛಲ—ಪ್ಲಕ್ಕಿಗಾಗಿ ತಮ್ಮ
ಚಿಕ್ಕಪೇಟೆ ಸುತ್ತೋದೆಲ್ಲ—ಸೀರೆಗಾಗಿ—ಗಂಡ
ರೂ. ಆ. ಎಣ್ಸೋದೆಲ್ಲಾ—ಪ್ರೀತಿಗಾಗಿ—ನನ್ನ
'—ಫಾಲೋಆನ್' ಮಾಡಿಸೋದು—ರಚ್ಚಿಗಾಗಿ ॥ ೪ ॥

—ಗೋಡಂಬಿ.

[ದಾಸರ ಅನುಕರಣೆಯ ಅನುಕರಣೆ ಅಲ್ಲವೇ]

—ಸಂ.



ಮಾತ್ರೆ ಚಿಕ್ಕದಾದರೂ, ಕೀರ್ತಿಗೇ ಕಾಸು

ಕಳ್ದಿದ್ ದೇವರ ಡಬ್ಬಿ ಆಣೆ!

(Bennctt Carf ಪ್ರೇರಿತ)

"ಗುಡೀಗ್ ಹೋಗ್ತೀನಮ್ಮಾ—ಅಮ್ಮಾ
ಕಾಸ್ ಕೊಡೆ ಅಮ್ಮಾ"—
ಅಂತ ಬೇಡಿ ಗೌರಿಗೆರಡು
ಆಣೆ ಸಿಕ್ತಮ್ಮಾ:
ದೇವರ ಡಬ್ಬೀಗೊಂದಾಣೆ!
ತಿಂಡೀ ಕೊಳ್ಳೋಕೊಂದಾಣೆ!

ಗೌರಿ ಕಮ್ಲೂ ಪಾತೂ ಕೂಡಿ
ಬೀದಿಲ್ಬರ್ತಾ ಇದ್ರು,
ಆಣೆ ಒಂದು ಜಾರ್ಕೊಂಬಿಡ್ತು
ಗೌರಿ ಮುಷ್ಟೀಲಿದ್ರು!
"ಹೋಯ್ತಲ್ಲಮ್ಮಾ ಒಂದಾಣೆ
ಅಯ್ಯೋ ಅಮ್ಮಾ ಕೊಟ್ಟಾಣೆ"

ಗೌರಿ ಅಳ್ತಾನೇ ಇದ್ಲು
ಕಳೆದ್ಹೋಯ್ತೂ ಅಂತ—
ಪಾತು ಹುಡುಕ್ತಾನೇ ಇದ್ಲು
ಎಲ್ಹೋಯ್ತೂ ಅಂತ—
ಕಮ್ಲೂ ಮಾತ್ರ ಬೊಟ್ಟನ್ಕಚ್ಚಿ
ಸುಮ್ನೆ ನಿಂತ್ಲು ಹುಚ್ಚಿ!

ಹುಚ್ಚಿ ಅಂದ್ನೆ—ಅಲ್ಲ ಜಾಣೆ—
ಘಾಟಿ—ಆದ್ರೂ ಜಾಣೆ!
"ಬಾರೆ ಪಾತು—ಬಾರೆ ಗೌರಿ
ಹೋಗ್ಲಿ ಆ ಒಂದಾಣೆ—
ಕಳ್ದಿದ್ ದೇವರ ಡಬ್ಬಿ ಆಣೆ"—
ಅಂದ್ಲು—ಕಮ್ಲು ಜಾಣೆ!

—ಎ. ಎಸ್. ರಾಮಕೃಷ್ಣ.

ನಮ್ಮೂರಿನ ರಾಮೋತ್ಸವ

—— o ——

ಮಾಮೂಲಿನಂತೆ ನಮ್ಮೂರಿನಲ್ಲಿ ರಾಮೋತ್ಸವ ಸಮಾರಂಭವು ನಡೆಯುಲಿದೆ. ತದಂಗವಾಗಿ ನಿತ್ಯವೂ ಬೆಳಗ್ಗೆ ಅಭಿಷೇಕ, ಪಾರಾಯಣ, ಮಂಗಳಾರತಿ ತೀರ್ಥಪ್ರಸಾದ ವಿನಿಯೋಗ. ಕೊನೆಯ ಎರಡು ಕಾರ್ಯಕ್ರಮಗಳಿಗೆ ಎಲ್ಲೂ ಇಲ್ಲದ ಜನ. ಇದನ್ನು ನೋಡಿ ಪಾರಾಯಣ ಮಾಡುವ ಶಾಸ್ತ್ರಿಗಳಿಗೆ ಬಹಳ ಜಿಗುಪ್ಸೆ ರಾಮಾಯಣವನ್ನು ಶ್ರೀರಾಮನಿಗೇ ಓದಿ ಹೇಳಬೇಕಲ್ಲ ಎಂದು ಬಹಳ ಪೇಚಾಡುತ್ತಾರೆ. ಅಂತು ತೀರ್ಥಪ್ರಸಾದ ವಿನಿಯೋಗ ಸ್ವಲ್ಪ ಗಮನಾರ್ಹವಾದ್ದು. ತೀರ್ಥಕೊಡುವುದು ಒಂದು ಕಲೆ ಎನ್ನಿಸುವುದಾದರೆ, ಅದನ್ನು ಕೊಡದೇ ಉಳಿಸಿಕೊಳ್ಳುವುದು ಇನ್ನೂ ದೊಡ್ಡ ಕಲೆ. ಇಷ್ಟು ಪೂಜ್ಯತೆ ಆ ತೀರ್ಥಕ್ಕೆ ಬಂದಿರುವುದು ಶ್ರೀರಾಮನ ಅನುಗ್ರಹ ಅದರಲ್ಲಿದೆಂತಲ್ಲ. ಆದರೆ ಅದರ ಅಸಾಧಾರಣ ರುಚಿ ಭಕ್ತಾದಿಗಳು ಅರ್ಪಿಸಿದ ಹಾಲು, ಹಣ್ಣು, ಮೊಸರು, ಕೇಸರಿ, ಸಕ್ಕರೆ ಇತ್ಯಾದಿ ಅತಿರುಚಿಯಾದ ಪದಾರ್ಥಗಳ ಸಮ್ಮಿಲನವೇ ಆ ತೀರ್ಥ. ಪಂಚಾಮೃತ ಎಂದು ಕರೆಸಿಕೊಳ್ಳಲು ಯೋಗ್ಯವಾದ ವಸ್ತು. ಇದರಲ್ಲಿ ವಿಟಮಿನ್ ಜಾಸ್ತಿ ಎಂತಲೊ ಅಥವಾ ಅದರ ರುಚಿಗೋಸ್ಕರವೊ ನಮ್ಮೂರಿನ ಕರಣೀಕರು ತೀರ್ಥದ ಬಟ್ಟಲನ್ನು ಹಿಡಿದುಕೊಂಡು ಗರ್ಭಗುಡಿಯಿಂದ ನೆಟ್ಟಗೆ ಹೊರಡುತ್ತಾರೆ. ಸಣ್ಣ ಉದ್ಧರಣೆಯಲ್ಲಿ ಬಹಳ ಶಿಸ್ತಿನಿಂದ ತೀರ್ಥ ಕೊಟ್ಟ ಮೇಲೂ ಇನ್ನೂ ಮುಕ್ಕಾಲು ಬಟ್ಟಲು ತೀರ್ಥ ಉಳಿದೇ ಇರುತ್ತೆ. ಇನ್ನೊಂದು ಸಾರಿ ತೀರ್ಥ ಕೇಳಿದವರನ್ನು ಉಸಿರಡುಗುವಂತೆ ಛೀಮಾರಿ ಮಾಡುತ್ತಾರೆ. ತೀರ್ಥ ಕೊಡುವಾಗ ದೃಷ್ಟಿ ನಾಸಿಕಾಗ್ರದಲ್ಲೇ ನೆಟ್ಟಿರುವಂತೆ ಕಂಡರೂ, ಅದು ಕೈ ನೀಡುವವನ ಮೇಲೆ ಬಹಳಮಟ್ಟಿಗೆ ಬಿದ್ದಿರುತ್ತೆ. ಎಲ್ಲರಿಗೂ ಒಂದು ಬಾರಿ ಕೊಟ್ಟನಂತರ ಸರ್ರನೆ ಗರ್ಭಗುಡಿಯೊಳಕ್ಕೆ ಹೋಗಿ, ನಂದಾದೀಪಕ್ಕೆ ಗಾಳಿ ಹೊಡೆಯುವುದೆಂಬ ನೆಪದ ಮೇಲೆ ಕಿಟಕಿ ಬಾಗಿಲುಗಳನ್ನು ಹಾಕಿ, ಸುರಕ್ಷಿತವಾದ ಮೂಲೆ ಕಡೆ ತಿರುಗಿ, ಸುತ್ತಮುತ್ತಲೂ ಒಂದುಸಾರಿ ನೋಡಿ, ಸಮಯವರಿತು, ನಿಮಿಷಾರ್ಧದಲ್ಲಿ ಅಷ್ಟನ್ನೂ ಏಕಾಪ್ರೋಷಣೆ ಮಾಡುತ್ತಾರೆ. ಕೂಡಲೇ ಟೊಂಕ ಕಟ್ಟಿ ಪ್ರಸಾದ ವಿನಿಯೋಗಕ್ಕೆ ನೆರವಾಗಿಬಿಡುತ್ತಾರೆ.

ಇನ್ನು ಸಾಯಂಕಾಲ ಸಂಗೀತ ಕಾರ್ಯಕ್ರಮ. ಅದರ ವೈಖರಿ ಅಷ್ಟಿಷ್ಟಲ್ಲ. ಅನಿರ್ದಿಷ್ಟ ಕಾಲದಲ್ಲಿ ಪ್ರಾರಂಭಿಸಿ, ಅನೇಕ ವಿಘ್ನಪರಂಪರೆಗಳನ್ನೆಲ್ಲ ಎದುರಿಸಿ ಕೊನೆಗೆ ಗೊತ್ತುಗುರಿಯಿಲ್ಲದೆ ನಿಂತುಬಿಡುತ್ತೆ. ವಿಘ್ನಗಳನ್ನೆದುರಿಸುವ ಶಕ್ತಿ ಸಂಗೀತಗಾರನದಲ್ಲ· ಆ ಧ್ವನಿಧ್ವಂಸಕ ಯಂತ್ರದ್ದು.

ನಮ್ಮೂರಿನ ಜನಗಳ ಮನಸ್ಸಿನಲ್ಲಿ ಸಂಗೀತದ. ಅದರಲ್ಲೂ ಸ್ತ್ರೀಸಂಗೀತದ ಪ್ರತಿಷ್ಠೆಗೌರವಗಳನ್ನು ಕಾದಿಟ್ಟಿರುವ ವ್ಯಕ್ತಿ ಅಂದರೆ ನಮ್ಮ ಕಾರ್ಯದರ್ಶಿಗಳು. ಈಗಲೂ ನೋಡಬಹುದು. ಯಾರಾದರೂ ಹೆಂಗಸರ ಸಂಗೀತ ಏರ್ಪಟ್ಟಿರೆ ಸರಿ, ಜನ ಕಿಕ್ಕಿರಿದಿರುತ್ತಾರೆ. ಇವರ ಕಾರ್ಯದರ್ಶಿತ್ವದಿಂದ ಉಂಟಾಗಿರುವ ಇನ್ನೊಂದು ಪರಿಣಾಮವೇನೆಂದರೆ ಸಂಗೀತ ಅಂದರೆ ಕಣಿವೆ ಕೆಳಗಿನ ವಿದ್ವಾಂಸರಲ್ಲಿ ಹೊರತು ನಮ್ಮವರಲ್ಲಿಲ್ಲ ಎಂಬುದು. ನಮ್ಮೂರಿನ ಜನರು ಇದರಲ್ಲಿ ಪೂರ್ಣ ಸತ್ಯವನ್ನು ಕಂಡಿದ್ದಾರೆ. ಆದಕಾರಣ ಸ್ತ್ರೀ ಸಂಗೀತವಾದರೆ "ಸಂತೆಗಿಂತ ಮುಂಚೆ ಗಂಟುಕಳ್ಳರು ನೆರೆದ ಹಾಗೆ" ಜನ ಸೇರುತ್ತಾರೆ. ಪುರುಷ ವ್ಯಕ್ತಿಯದಾದರೆ ಸಂಗೀತ ಶುರುವಾದ ಮೇಲೆ ಸೇರುತ್ತೆ ಆಗಲೂ ಸೇರಿದರೆ ಸೇರಬಹುದು, ಬಿಟ್ಟರೆ ಬಿಡಬಹುದು. ಅಷ್ಟೆ. ಸಂಗೀತಗಳೇನೋ ಹನ್ನೆರಡು ದಿವಸಗಳು ಅವಿಚ್ಛಿನ್ನವಾಗಿ ನಡೆಯುವುವೆಂಬ ಪ್ರಕಟನೆ ಎಲ್ಲೆಲ್ಲೂ ನಡೆದಿರುತ್ತೆ. ಘನವಿದ್ವಾಂಸರುಗಳ ಹೆಸರು ಒಂದರ ಕೆಳಗೆ ಒಂದು ಇರುವುದನ್ನು ನೋಡಿ ಯಾವ ಸಂಗೀತ ಪ್ರೇಮಿಯ ಮನಸ್ಸುತಾನೇ ಹಿಗ್ಗದು! ಆದರೆ ಎಲ್ಲದರ ಕೊನೆಯಲ್ಲಿ ಕಂಡರೂ ಕಾಣಿಸದ ಹಾಗೆ D.V. ಎಂಬ ಅಕ್ಷರಗಳನ್ನು ನೋಡಿದರೆ ಅವನ ಹೃದಯಕ್ರಿಯೆ ನಿಂತುಹೋಗುತ್ತೆ. ಸರಿ. ಉತ್ಸವದ ಪ್ರಾರಂಭದಲ್ಲಿಯೇ ವಿದ್ವಾಂಸರ ಗೈರುಹಾಜರಿ. ನಮ್ಮೂರಿನ ಚಿರಪರಿಚಿತ ಆದರೆ ಚಿರನೂತನ ಸಂಗೀತ ಕೋವಿದರೆ ಆ ದಿನದ ಕಾರ್ಯನಿರ್ವಾಹ ಮಾಡಬೇಕಾಗುತ್ತೆ. ಮಾರನೇ ದಿನವೂ ಡಿಟೊ ಪಕ್ಕದ ಊರಿನ ಕೀರ್ತನಕಾರರು ಪ್ಲಸ್ ಸಂಗೀತಗಾರರೂ ಆದ ಕರ್ಣಾಮೃತಯ್ಯನವರ ಕರ್ಣ ಕಠೋರ ಕಿರಿಚಾಟ. ಮೂರನೆ ದಿನ ಪ್ರೋಗ್ರಾಂ ಪ್ರಕಾರ ಹರಿಕಥೆ. ಬಹು ಯಶಸ್ವಿಯಾಗಿ ನಡೆಯುತ್ತೆ. ಮಾಮೂಲಿನಂತೆ ಹೆಂಗಸರ ಸಂಖ್ಯೆ ವಿಪುಲ. ಒಂದು ಕಡೆ ಹರಿಕಥೆ ಮತ್ತೊಂದು ಕಡೆ ಆತ್ಮಕಥೆ ಅಂತು ಮಂಗಳಾರತಿ ತಟ್ಟೆ ಭರ್ತಿ. ನಾಲ್ಕನೆ ದಿನ ಪ್ರಕಟವಾದ ಕಾರ್ಯಕ್ರಮದಲ್ಲಿ $\frac{1}{3}$ ಭಾಗ ಹಾಜರ್. ಇನ್ನು $\frac{2}{3}$ ಭಾಗ ಚಕ್ಕರ್. ಅರ್ಥಾತ್ ಲೋಕಲ್ ಪಕ್ಕವಾದ್ಯ ಆ ದಿನ ನಮ್ಮೂರಿನ ವಿದ್ವಾಂಸರ ಭರಾಟೆ ತಡೆಯುವುದೇ ಕಷ್ಟ. ಹೊರಗಿನವರ ಹುಟ್ಟನ್ನ ಅಡಗಿಸಬೇಕೆಂಬ ಅಮಲಿನಲ್ಲಿ ಬಾರಿಸಿ ಬಾರಿಸಿ ತಂತಿ ಕಿತ್ತುಹೋದುದೂ ಉಂಟು, ಮೃದಂಗದ ಎಡದ ಚರ್ಮ ಹರಿದು ಕೈ ಒಳಕ್ಕೆ ಹೋದುದೂ ಉಂಟು. ಹೀಗೆ ಒಂದೊಂದು ದಿನ ಒಂದೊಂದು

ಅನಿರೀಕ್ಷಿತ ಸನ್ನಿವೇಶ ಒದಗುತ್ತೆ. ಒಟ್ಟಿನಲ್ಲಿ ನಮ್ಮೂರಿನ ರಸಿಕರಿಗೆ ಅಚ್ಚು ಮೆಚ್ಚಿನ ಸಂಗೀತಗಳನ್ನು ಅಚ್ಚಿನಲ್ಲೇ ಕೇಳುವ ಸೌಭಾಗ್ಯ ವರ್ಷ ವರ್ಷ ದೊರಕುತ್ತೆ.

ಮೇಲ್ಕಂಡ ವಿಚಾರಗಳ ಯೋಚನೆಯಲ್ಲಿ ನಿದ್ದೆ ಹೋದೆ. ಆಗ ನನ ಗೊಂದು ಕನಸು ಬಿತ್ತು. ಅದರಲ್ಲಿ ನಾನು ಕಂಡದ್ದಿಷ್ಟೆ. ಶ್ರೀರಾಮಚಂದ್ರನು "ಎಲ್ಲಿರುವೆ ಕಂದ ಬಾರೊ ಮಾರುತಿ" ಎಂದು ಹಾಡುತ್ತಿರುವುದು ಕೇಳಿಸಿತು. ಸ್ವಲ್ಪ ಹೊತ್ತಿನಲ್ಲೆ ಮಾರುತಿ ಬಂದು ಶ್ರೀರಾಮನಿಗೆ ನಮಸ್ಕರಿಸಿ ಕೈಜೋಡಿಸಿ ನಿಂತನು. ಆಗ ಅವನನ್ನು ಕುರಿತು ಶ್ರೀರಾಮನು ಹೀಗೆ ಹೇಳಿದನು "ಏನು ಭಕ್ತಾಗ್ರಣಿ! ನಾನು ಅವತಾರವೆತ್ತಿದ ಭೂಲೋಕದಲ್ಲಿ ನನ್ನ ಉತ್ಸವಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಇದನ್ನು ನೀನು ಸ್ವಲ್ಪ ಗಮನಕ್ಕೆ ತಂದು, ಕುಂದುಕೊರತೆಗಳನ್ನು ಪರಿಹರಿಸಬಲ್ಲೆಯಾ?". ಅದಕ್ಕೆ ಆಂಜನೇಯನು "ಮಹಾಪ್ರಭು! ನನ್ನ ಬುದ್ಧಿಗೆ ತೋರುವುದೊಂದೇ ಮಾರ್ಗ. ಅದೇನೆಂದರೆ, ಈ ಮೂರ್ಖ ಮಾನವನಿಗೆ ಎಷ್ಟು ಹೇಳಿದರೂ ಬುದ್ಧಿ ಬರದಿರುವುದರಿಂದ, ಅವನು ನಡಿಸುವ ಕೆಲಸಗಳೆಲ್ಲ ಕೆಲವು ಕಾಲ ನಡೆದು, ಏನಾದರೂ ಕಾರಣದಿಂದ ನಿಂತು ಹೋಗುವಂತೆ ಅನುಗ್ರಹಿಸು ನನ್ನೊಡೆಯ! ಈಗ ನಡೆಯುವಂತೆ ನಡೆಯುವು ದಕ್ಕಿಂತ, ನಡೆಯದಿರುವುದೇ ಲೇಸಲ್ಲವೇ" ಶ್ರೀರಾಮನು "ತಥಾಸ್ತು" ಎಂದನು. ಆಂಜನೇಯನು ಸ್ವಲ್ಪ ಹೊತ್ತು ಸುಮ್ಮನಿದ್ದು ಕೂಡಲೇ ರಾಮನನ್ನು ಕುರಿತು "ಮಹಾರಾಜ! ಇನ್ನೊಂದು ವಿಚಾರ. ನನ್ನನ್ನು ಗಾನವಿದ್ಯೆಗೆ ಅಧಿಪತಿಯ ನ್ನಾಗಿ ಮಾಡಿದ್ದೀರಿ. ಈ ವಿದ್ಯೆಯ ಹೆಸರಿನಲ್ಲಿ ಕಾಮಕ್ರೋಧಗಳು ಬೆಳೆದು ಜನಗಳಲ್ಲಿ ವೈಮನಸ್ಯ ಹೆಚ್ಚಾಗುತ್ತಿದೆ. ಆದ್ದರಿಂದ ಭೂಲೋಕದ ಗಾಯನ ಸಮಾಜಗಳ ಗತಿಯೂ ಹೀಗೇ ಆಗಲಿ ಎಂದು ನನಗೋಸ್ಕರ ಅಗ್ರಹಿಸಬೇಕು! ಪ್ರಭು!" ಶ್ರೀರಾಮ ಮತ್ತೊಮ್ಮೆ "ತಥಾಸ್ತು".

ಇಷ್ಟು ಹೊತ್ತಿಗೆ ನನಗೆ ಎಚ್ಚರವಾಯಿತು. ಆಶ್ಚರ್ಯಚಕಿತನಾಗಿ ಹಾಸಿ ಗೆಯ ಮೇಲೆ ಎದ್ದು ಕುಳಿತೆ

—"ಸತ್ಯವಾದಿ."

"ನಶ್ವರ ಅಲ್ಲಾ ತೇರೆ ಕಾಂ.
ಸಬಕೋ ಸದ್ಗತಿ ದೇ ಭಗವಾನ್"

—ವೀರಣ್ಣ.

ಮೆಂಬರಾಗುವ ಜಾಣ

(ಮುಗುಳಿಯಲ್ಲಿ ಮುಳುಗಿ)

ಮೆಂಬರಾಗುವ ಜಾಣ
ಕಂಡಿತದ ನುಡಿ ನಾಲ್ಕು ಹೇಳುವೆನು ಕೇಳು

ವೋಟೆಂಬ ಬಿಳಿ ಚೀಟಿ
ಕೊಡುವವನ ಶುಭ್ರತೆಗೆ ಸರಿಜೋಡು ಕೇಳು.

ನಮ್ಮ ಬಾಳಿನ ಬಳ್ಳಿ
ನಿನ್ನ ಮೊದಃಳಲಿ ಬೆಳೆಸ ಬಂದದ್ದೆ, ಕೇಳು.

ಲಂಚ ಗಂಧವ ತಂದು
ಇಂಥ ಬಿಳಿ ಚೀಟಿಯಲಿ ಹಚ್ಚದಿರು ಕೇಳು.

ಸೊತ್ತೆಂದು ತೊತ್ತೆಂದು
ಮತ್ತೆ ಅನುನಾಯಂತೆ ತಿಳಿಯದಿರು ಕೇಳು.

ಅರಿವ ನೀಯದೆ ಅವಗೆ
ಅರಿವಿಲ್ಲ ಎನ್ನುತ್ತ ಜರಿಯದಿರು ಕೇಳು.

ಗೆರೆಹಾಕಿ ಬಲೆ ಹಾಕಿ
ಸೆರೆಯೊಳಗೆ ಇಟ್ಟಂತೆ ಇಡಲದುವೆ ಕೀಳು.

ನೂರು ತಪ್ಪಿನ ತಿಪ್ಪೆ!
ನಿನ್ನ ಉಪ್ಪಿಗೆ ಸೊಪ್ಪು ಹುಡುಕದಿರು ಕೇಳು.

ಮೆಂಬರೆಂದರೆ ತುಂಬ
ಉಂಬ ಹುಂಬನೆ ಅಲ್ಲ, ಉಣಿಸುವವ ಕೇಳು.

ಆಗುವೊಡೆ ಈ ಮೆಂಬ
ರಾಗಿ ದೇಶದ ಜನರ ತಣಿಸುವುದೇ ಮೇಲು.

ನನ್ನ ಮನದನ್ನೆಯ ಬಡಾಯಿ !!

ಮೊನ್ನೆ—ಅದೇ, ನಮ್ಮ ಉಷನ ಆರತಿ ದಿವ್ಸ—ರಾತ್ರಿ ಎಂಟು ಗಂಟೆಗೆ ಆಫೀಸಿನಿಂದ ಆಗಮಿಸಿದೆ. ಐದಾರು ಹೆಂಗೆಳೆಯರನ್ನೊಳಗೊಂಡ ಹಿಂಡೊಂದು ಇನ್ನೂ ಹಜಾರದಲ್ಲೇ ಪವಡಿಸಿತ್ತು. "ಪಾಪ! ಶುಭ ದಿವ್ಸ! ಇವತ್ತೂ ಯಾಕೆ ಅವಳ ಸರಸ ಸಲ್ಲಾಪಗಳಿಗೆ ಕಲ್ಲುಹಾಕಲಿ ನಾನು?!" ಅಂತ ಕನಿಕರ ಪಟ್ಕೊಂಡು ಗೇಟ್‌ನಿಂದ 'ಗುಯ್ಞ್' ಸಂಗೀತ ಹಾಡಿಸದೆ. ಪಾದರಕ್ಷೆಯ ಪಟಪಟ ನಾದ ವನ್ನೂ ತೆಪ್ಪಗಾಗಿಸಿ, ಹಜಾರದ ಪಕ್ಕದ ರೂಮಿನಲ್ಲೇ ಕುಳಿತೆ. ಪಠಿಸಲಿಕ್ಕೆ ಯಾವ ಪುಸ್ತಕವೂ ಕೂಡ ಇಲ್ಲದಿದ್ದುದರಿಂದ, ಹೆಂಗೆಳೆಯರ ಹರಟೆಯನ್ನು ಕೇಳ್ತಾ, ಕುಳಿತುಕೊಂಡಿದ್ದೆ... ಏನೋ ಕಥೆ ಹೇಳ್ತಿದ್ದಹಾಗಿತ್ತು....'ಬೇಜಾರಿನ ಪರಿಹಾರಕ್ಕೆ ಬೇಕಾದ್ದೇ ಅದು'—ಅಂತ ಬಾಯಿ ಬಿಟ್ಕೊಂಡು ಆಲಿಸಿದೆ—ಪಕ್ಕದ್ಮನೆ ಪಾರ್ವತಮ್ಮನವರ ಧ್ವನಿ ಸ್ಪಷ್ಟವಾಗಿ ಕೇಳಿ ಬರ್ತಿತ್ತು!

"ಅದೇ, ನಾಸ್ಕಿಂಗಿನಲ್ಲಿದ್ನಲ್ಲಾ ನಮ್ಮ ನಾಣಿ! ಈಗ್ಗೆ ಮೂರು ವರ್ಷದ ಕೆಳ್ಗೆ—ಒಂದ್ರಾತ್ರಿ ಅವ್ನಿದ್ದ ಹೋಟಲಿಗೆ ಏನೋ ಅಚಾತುರ್ಯದ ಪರಿಣಾಮ್ವಾಗಿ ಅಗ್ನಿ ಸ್ಪರ್ಶವಾಯ್ತಂತೆ! ಹೋಟ್ಲು ಕೆಳ್ಗಿಂದ 'ಧಗಧಗಾ' ಅಂತ ಉರೀತಿದೆ! ನಮ್ಮ ನಾಣಿ ನಾಲ್ಕನೇ ಅಂತಸ್ತಿನಲ್ಲಿದಾನೆ! ಆಗೇನ್ಮಾಡ್ಬೇಕು ನಮ್ಮ ನಾಣಿ?! ಹಾಕ್ಕೊಂಡಿದ್ದ ಶರ್ಟು ಬಿಚ್ಚಿದ್ನಂತೆ. ದೇವರ್ಮೇಲೆ ಭಾರ ಹಾಕಿ ಹಾಗೂ ಹೀಗೂ ಈಚೆಗೆ ಬಂದ್ನಂತೆ!!! ಫೈರ್ ಎಂಜಿನ್ ಇನ್ನೂ ಬಂದಿಲ್ಲದ್ದನ್ನ ನೋಡಿ, ಉರೀತಿದ್ದ ಹೋಟ್ಳೊಳಕ್ಕೆ ಹೋಗಿ, "ಫೈರ್ ಎಂಜಿನ್ ಕಳಿಸೋದಕ್ಕೆ ಏಕಿಷ್ಟು ಲೇಟು?!" ಅಂತ ಘರ್ಜಿಸಿ ಫೋನ್‌ಮಾಡಿ ಈಚೆಗೆ ಸುಖ್ವಾಗಿ ಬಂದ್ನಂತೆ!! ನಾಸ್ಕಿಂಗಿನಲ್ಲಿ ಅವನಿರೊ ತನ್ಕ ನೂರಾರು ಜನ ಅವ್ನ ಕೊಠಡಿ ಮುಂದೆ ಕೈಮುಗೀತಿದ್ರಂತ್ರೀ!! ಏನೋ ದೇವರು ದೊಡ್ಡೋನಪ್ಪಾ!" ಎಂದು ನಿಟ್ಟುಸಿರ್ಗರೆದು ನಿಲ್ಲಿಸಿದರು ಪಾರ್ವತಮ್ಮ.

ಅವರು ಮಾತು ನಿಲ್ಲಿಸಿ ಮೂರು ಸೆಕೆಂಡ್ ಆಗಲಿಕ್ಕಿಲ್ಲ.....! ಆಗಲೇ ಮ್ಯಾನೇಜರ್ ಹೆಂಡ್ತಿ ಮೀನಾಕ್ಷಮ್ಮ ಮಾತು ಮೊದಲು ಮಾಡಿದ್ರು!

"ಅಲ್ರೀ!....ಅಮೃತಮ್ಮ!....ನಮಗೆ ಸ್ವರಾಜ್ಯ ಕೊಡ್ತೀವೀ....ಕೊಡ್ತೀವೀ ....ಅಂತ ಸುಮ್ನೆ ಸತಾಯಿಸ್ತಿದ್ದ ಪರಂಗಿಯೋರು, ತಾವು ಹೇಳಿದ ವಾಯಿದೇಗೆ

ಒಂಭತ್ತು ತಿಂಗ್ಳು ಮುಂಚೇನೇ ಗಂಟುಮೂಟೇನ ಕಟ್ಟಿದ್ರಲ್ಲಾ.....ಅದ್ರಲ್ಲಿ ನಮ್ಮ ಕಿರೀ ಹುಡ್ಗ ಕಿಟ್ಟೂನ ಕೈವಾಡ ಏನೂ ಇಲ್ಲ ಅಂದ್ಕೊಂಡ್ರಾ?! ಆಗ ನಮ್ಮ ಕಿಟ್ಟು ಒಬ್ಬ ನಿಸ್ಪೃಹತ ಕಾಂಗ್ರೆಸ್ ಸದಸ್ಯ... ಸದಸ್ಯ ಏನು!?.... ನಾಯಕ!! ಆಗ ಅವನು ಸರ್ದಾರರ ಸಹವಾಸ ಬಿಟ್ಟು ಬೇರೆ ಇರ್ತಿರ್ಲಿಲ್ಲ! ಗಾಂಧಿ ಇವ್ನ ಗೈರತ್ ಮೆಚ್ಚಿದ್ರು! ಏನ್ರೀ!, ನಮ್ಮ ಕಿಟ್ಟಿ ಮೌಂಟ್ ಬೇಟನ್ನರ ಮನೇಲಿ ಮೂರ್ದಿನ ಮಲಗಿದ್ನಂತ್ರಿ!! ೧೯೪೭ನೇ ಇಸವೀಲಿ ಜುಲೈನಲ್ಲಿ ಇಲ್ಲೀಗ್ಬಂದಿದ್ದ. ಹೊರಡೋವಾಗ ಇಂಟರ್ನಲ್ಲಿ ಓದ್ತಿರೋ ನಮ್ಮ ಎಂಕೂವಿನ ಒಂದು 'ಎಸ್ಸೆ' (Essay), ಎಸ್. ಎಸ್. ಎಲ್. ಸಿ. ನಲ್ಲಿ ಓದ್ತಿರೋ ನಮ್ಮ ಕಂಠಿದೊಂದು 'ಕಾಂಪೋಸಿಷನ್' (Composition) ಜೋಪಾನ್ವಾಗಿ ತೊಗೊಂಡ್ಹೋದ! ಏಕೇ ಅಂತ ಹೇಳ್ಲಿಲ್ಲ: ಬಂತು ನೋಡಿ ಕೆಲವು ದಿನದ ಮೇಲೆ ಒಂದು ಕಾಗ್ದ.

"......ಭಾಷಾ ಪ್ರೇಮಿಗಳಾದ ಬ್ರಿಟಿಷರಿಗೆ ತಮ್ಮ ಭಾಷೆ ಪರರ ಕೈಲಿ ಹಾಳಾಗುವುದನ್ನು ನೋಡಿ ತುಂಬಾ ವ್ಯಸನವಾಗಿದೆ. ನಮ್ಮ ಎಂಕೂ ಮತ್ತು ಕಂಠಿಯರ ಇಂಗ್ಲಿಷ್ ಭಾಷೆಯನ್ನು ಮ|| ರಾ|| ಮೌಂಟ್ ಬೇಟನ್ನರಿಗೆ ತೋರಿಸಿದೆ. ಮೊದಲೇ ಕೆಂಪುಮೈ—ಕೆಂಡದಂತಾಗಿತ್ತು ನಾನಿಲ್ಲದಿದ್ದರೆ ಅಂದು ಸುಟ್ಟೇ ಹೋಗುತ್ತಿದ್ದರೋ ಏನೋ!? 'ಮೇ'ನಲ್ಲಿ ಹೋಗಬೇಕೆಂದಿದ್ದವರು ಮುಂದಿನ ತಿಂಗಳೇ ಹೋಗುತ್ತಾರಂತೆ"—ಇತಿ, ಕಿಟ್ಟ. ನೋಡದ್ರಾ! ನಮ್ಮ ಕಿಟ್ಟಿ ಬರೆದದ್ದು ನಿಜ. ಆಗಸ್ಟ್ (೧೯೪೭)ನಲ್ಲೇ ಹೊರಟ್ಹೋದ್ರಲ್ರೀ ಅವ್ರೆಲ್ಲಾ! ಈಗ್ಲೂ ನೆಹ್ರು ನಮ್ಮ ಕಿಟ್ಟಿ ಮನೆಮುಂದೆ ಕಾರ್ ನಿಲ್ಸಿ, ಕಿಟ್ಟೀನ ಮಾತಾಡ್ಸಿ ಕೊಂಡು, ಮಕ್ಕಳನ್ನ ಮುದ್ದಾಡಿ ಹೋಗ್ತಾರಂತ್ರೀ!!

ಹೀಗೆ, ಕಡೇಮನೆ ಕಮಲಮ್ಮನೋರು, ಆಚೆಮನೆ ಅಲಮೇಲಮ್ಮ ಬೆಂಗ್ಳೂರಿನಿಂದ ಬಂದಿದ್ದ ಭಾಗೂಬಾಯಿ.......ಎಲ್ಲಾ ಯಥಾಶಕ್ತಿ ತಮ್ಮ ಸಂಸಾರದವರ ಸಾಹಸ ಕಾರ್ಯವನ್ನು ಸುರಸವಾಗಿ ವಿವರಿಸಿದ್ರು.

ಎಲ್ಲರ ಸರದೀನೂ ಆಯ್ತು—ಇನ್ನು ನನ್ನ ಸರೋಜನ ಸರ್ದಿ. "ಅವ್ಳೇ ನ್ಹೇಳಬಹ್ದು?" ಅಂತ ಯೋಚಿಸ್ತಿದ್ದೆ. ಮೂರು ನಿಮಿಷಆದ್ರೂ ಮಾತೇಇಲ್ಲ. ಮೌನ!... ಕಿಟಕೀಲಿ ಇಣಿಕಿನೋಡಿದೆ. ಎಲ್ಲರ ಮುಖವೂ ಪ್ರಸನ್ನವಾಗಿರುವಾಗ ನನ್ನ ಕೋಮಲಾಂಗಿಯ ಮುಖಕಾಂತಿ ಹೀನವಾಗಿದೆ....ಆ ಶಾಂತಿ ಹೀನ ಮುಖಕ್ಕೆ ಕಳೆ ತರಲು ಪ್ರಯತ್ನಿಸುತ್ತಿರುವಂತೆ ಅಲ್ಲಲ್ಲೇ ಅನೇಕ ಬೆವರು ಹನಿಗಳು ವಜ್ರದೋಪಾದಿಯಲ್ಲಿ ಹೊಳೆಯುತ್ತಿವೆ! ಕುಂಕುಮ ಕಲಸಿಕೊಂಡು ಕಾಲುವೆಯಾಗಿ ಕೆಳಕ್ಕೆ ಹರಿಯುತ್ತಿದೆ ..

ಸ್ವಲ್ಪಹೊತ್ತು ಭೀಕರ ಮೌನ ಆವರಿಸಿತ್ತು.......! ಅಕ್ಕಿಯ ಮೂಟೆಯಲ್ಲಿ ಅಕ್ಕಿಯಬದಲು ರೊಕ್ಕವನ್ನು ಕಂಡ ಡಿಪ್ಪೋದವನಂತೆ, ನನ್ನ ಮುಖ ಅರಳಿತು. ಆ ದಪ್ಪ ಧ್ವನಿ ನನ್ನ ಧರ್ಮಪತ್ನಿಯದೆ!! ಕಿವಿ ನೆಟ್ಟಗಾಯಿತು.

"ಹಬ್ಬದ ಹಿಂದಿನ ದಿನ ರ್‍ರೀ, ಕಮಲಮ್ಮ! ....'ಇವರು' ಇನ್ನೂ ಆಫೀಸಿಗೆ ಹೋಗಿರ್ಲಿಲ್ಲ. ರೇಷನ್ ಆಫೀಸ್ನೋರು ಚೆಕ್‌ಮಾಡೋಕೇಂತ ಬಂದಿದ್ರು. 'ಬರ್ತಾರೆ ಕೂತ್ಕೊಳ್ಳಿ!' ಅಂತ ಕಡೇ ರೂಮಿನಲ್ಲೇ ಕುಕ್ಕಾಕ್ದೆ ಆ ಬಂದಿದ್ದೋನ್ನ. ನಮ್ಮನೇಲಿರೋರು - ನಾನು, 'ಇವರು', ಸೋಮು, ಉಷ. ಅವರ್ಕೊಂಡೋ ರೇಷನ್ ಅರ್ಧ ಹೊಟ್ಟೆ ಬರೊಲ್ಲ ಈ ಸಾರ್ತಿ ಏನಾದ್ರೂ ಮಾಡ್ಬೇಕೂ ಅಂತ ಅಂದ್ಕೊಂಡು 'ಇವರಿಗೆ' Procedure ಎಲ್ಲಾ ಹೇಳ್ದೆ. ಹೆದರ್ಕೊಂಡು 'ಹ್ಞು' ಎಂದ್ರು.


"ಮೊದಲು 'ಅವರ' ಹೆಸರು, ನಂತರ ನನ್ದು, ತದನಂತರ ಸೋಮು, ಉಷನ ಹೆಸರುಗಳು ಬರ್ಕೊಂಡ್ರು ಆ ಬಂದಿದ್ದೋರು....ಆಮೇಲೆ 'ಇವರು' ಘರ್ಜಿಸಿದರು. ಲೇ, ಲಚ್ಚೂನ ಕಳ್ಸಿ? ಶಂಕರೂದು ಸ್ನಾನ ಆಯ್ತೇನೆ? ಅಂತ. ತಾಳಿ ಕಳಿಸ್ತೇನೆ. ಅಂತ್ಹೇಳಿ, ಉಷನ್ನ ಕರ್ದು, ಹೊಸಲಂಗ ಬಿಚ್ಚಿ, ಹಳೇದೊಂದು ತಗಲ್ಹಾಕಿ, ತಲೆಕೆದರಿ, ಕುಂಕುಮ ಅಳ್ಸೀ, ಕಿವೀದು ಕಳ್ಚಿ 'ಹೋಗೇ ಲಚ್ಚು' ಅಂತ ಕಳಿಸ್ದೆ ನಂತರ ಸೋಮೂನ ಕರ್ದು, ಷರಾಯಿ ಬಿಚ್ಚಿ, ಚೆಡ್ಡೀ ತಗಲ್ಹಾಕೀ, ಟವಲ್ ಮೈಗೆ ಸುತ್ತಿ, ತಲೆಗೆ ನೀರುತಟ್ಟಿ ಕೆದರಿ, 'ಈಗ್ತಾನೆ ಸ್ನಾನಮಾಡ್ದ ಶಂಕರೂ. ಸುಬ್ಬು' ಸುಮತಿ ಸ್ಕೂಲ್‌ಗೆ ಹೋಗಿದ್ದಾರೆ, ಸಾಯಂಕಾಲ ಬಂದ್ರೆ ಸಿಗ್ತಾರೆ. ಅಂದ್ರೆ ಆ ಆಫೀಸರು, ಕಣ್ಮುಚ್ಚಿಕೊಂಡು, ಹೇಳಿದ್ಹೆಸರನ್ನೆಲ್ಲಾ ಬರ್ಕೊಳ್ತಿದ್ರು. ಇವರು ಅದೂ, ಇದೂ ಮಾತಾಡ್ತಾ, ಫುಡ್ ಆಫೀಸ್ನೋರು ದೇಶಕ್ಕೆ ಮಾಡುತ್ತಿರುವ ಸೇವೆ ಇತ್ಯಾದಿ—ವಿಚಾರಗಳ ಮೇಲೆ ಪುಟ್ಟಪುಟ್ಟ ಭಾಷಣಕೊಡ್ತಾ 'ತಲಾಷ್' ಮಾಡ್ತಾ ಇದ್ರು. ಅಷ್ಟರಲ್ಲೇ ಎರಡು ಬಟ್ಟಲು ಕರೀ ಕಾಫೀ ಮಾಡಿ ತಂದು ಕುಕ್ದೆ ಅವರ ಮುಂದೆ. ಆ ಚೆಕ್ ಮಾಡುವುದಕ್ಕೇಂತ ಬಂದಿದ್ದ ಆಸಾಮಿ, ಕಾಫೀ ಹಿರೀ, ಹೋಗ್ತಾ 'ನಾಳೆ ಆಫೀಸಿಗೆ ಬಂದರೆ, ನಾನೇ ನಿಮ್ಮ (೪+೪)ಕ್ಕೆ ಹೊಸ ಕಾರ್ಡುಕೊಡ್ತೇನೆ' ಅಂತ ಹೇಳಿ ಹಲ್ಕಿರೀತಾ ಹೋಯ್ತು. ಈಗ ನಮ್ಮ ಕಾರ್ಡಿನಲ್ಲಿ ೮ ಜನ ಇದೇವೆ. ಅಂತಹೇಳಿ ಮನದನ್ನೇ ಮಾತು ನಿಲ್ಲಿಸಿದಳು.

"ಇದೇನ್ ಸರೋಜಮ್ಮನೋರೆ? ನಿಮ್ಮನೇಲಿರೋರು ನಾಲ್ಕೇ ಜನ ಅಲ್ವೆ? ಅಲ್ಲೀಗೆ ನೀವು Double Rations draw ಮಾಡ್ತೀರಾ? ಒಳ್ಳೆ ಚೆನ್ನಾಗಿ 'ಕೈ' ಕೊಟ್ಟರಿ ಆ ಆಸಾಮಿಗೆ!! ಎಂದು ಮೂಗಿನ ಮೇಲೆ ಮೂರು ಬೆರಳಿಟ್ರು ಮೀನಾಕ್ಷಮ್ಮ!

ಮತ್ತೊಮ್ಮೆ ಇಣಿಕಿನೋಡಿದೆ; ಎಲ್ಲರ ಮೂಗುಗಳ ಮೇಲೂ ಬೆರಳು ಗಳು ತಾಂಡವವಾಡುತ್ತಿವೆ. ಎಲ್ಲರ ಹುಬ್ಬಿನ ಮಧ್ಯವೂ ಒಂದೊಂದು ಪ್ರಶ್ನಾರ್ಥಕ ಚಿಹ್ನೆ ಸ್ಪಷ್ಟವಾಗಿ ಕಾಣುತ್ತಿದೆ! ನನ್ನ ಮಾನದನ್ನೇ ಮಾತ್ರ ಪ್ರಶಾಂತ ವದನಳಾಗಿ 'ಮೆಕಾರ್ಥರ್ ಡಂಭ ಮುರಿದ ಟ್ರೂಮನ್' ಅಂತೆ ಠೀವಿಯಿಂದ ಕುಳಿತಿದ್ದಾಳೆ!

"ಅಷ್ಟು ಅಲ್ಪಾವಕಾಶದಲ್ಲಿ, ಅದು ಹೇಗೆ, ಇಷ್ಟೊಂದು ಸುಳ್ಳಿನ ಕಂತೆ ಪೇರಿಸಿ, ಆ ಸುಳ್ಳಿನ ಜತೆ ನನ್ನ ಹೆಸರೂ ಸೇರ್ಸಿ ನಿಜ ಅನ್ನುವಹಾಗೆ ನುಡಿದಳು ನನ್ನ ಮಾನದನ್ನೆ? ಎನ್ನುವುದು ನನಗಿನ್ನೂ ಒಂದು ಸಮಸ್ಯೆಯೇ ಆಗಿದೆ.

— ಹೋನಂಪ.



ಗುಮಾಸ್ತ: (ಆಶ್ಚರ್ಯದಿಂದ)
ಎಲಾ! ನನಗೂ ಈ ಪೋಲಿಸಿನವ ನಿಮಿರಿ ನಿಂತು ಸಲಾಂ ಹಾಕ್ತಾನಲ್ಲಾ!

"ಥತ್......."

ಆಕೆ: "ತನ್ನದೆಲ್ಲಾ ಹೊನ್ನನ್ನೋದು
ಹಾಡಿ ಹೊಗಳೋದು—
ಹೆರರದೆಲ್ಲಾ ಹೊಲಸನ್ನೋದು
ತೆಗಳಿ ಉಗುಳೋದು—
ಸಾಕ್ ನಿಲ್ಸೀಂದ್ರೆ ನಿವ್‌ಮಾತು
ಕೇಳಿ ಕೇಳಿ ಸಾಕಾಯ್ತು"

ಆತ:—"ಕ್ಷಮ್ಸು ಕಣೆ! ಈವಾಗ ತಿಳೀತು
ಆಡೋದು ಗೊತ್ತಾಯ್ತು
ನಿಜಕ್ಕೂ ನೋಡು ನಿನ್ನತ್ತೇಂದ್ರೆ
ಭೂದೇವಿ ಅಂತೀನಿ—
ಆದರೆ ನೋಡು ನನ್ನತ್ತೇಂದ್ರೆ
ಮೂದೇವಿ ಅಂ........"

ಆಕೆ:—"ಥತ್........"

—ಸರೋಜಿನಿ ಆರೂರ್.

ಗಾದೆಯ ಪ್ರಗತಿ

ಹಲ್ಲಿದ್ದರೆ ಕಡಲೇ ಇಲ್ಲ!
ಕಡಲೇ ಇದ್ದರೆ ಹಲ್ಲಿಲ್ಲ!!
ಅಂತ ಹಿಂದಿನವರು ಗಾದೆ ಮಾಡಿದ್ದರು ಅಲ್ಲವೇ!

ಆಗಿನ ಕಾಲದಲ್ಲಿ ಇದ್ದದ್ದು ಅದೊಂದೇ ಸಮಸ್ಯೆ. ಆದರೆ ಪ್ರಕೃತಿಯು ವಿಕಾಸಗೊಂಡಂತೆಲ್ಲಾ ಅಂದರೆ ನಮ್ಮ ಈಗಿನ ಸ್ನೇಹಿತರು,—ಆಂಗ್ಲೇಯರು ಹೇಳುವಂತೆ evolution ಆದಂತೆಲ್ಲಾ ಗಾದೆಯ ಪ್ರಗತಿಯೂ ಆಗಬೇಕಲ್ಲವೇ?

ಆಯಿತು! ಖಂಡಿತವಾಗಿಯೂ ಆಯಿತು.

ಆಗ ಹಲ್ಲು ಕಡಲೇ ಎರಡೇ ಬೇಕಾಗಿತ್ತು, ಗಾದೆ ಸರಿಹೋಗಲು. ಈಗ "ಹಸಿವು" ಎಂಬ ದೇಶಾದ್ಯಂತ ವ್ಯಾಪಿಸಿರುವ ಹೊಸ ನೂತನ ಕ್ರೂರಶಕ್ತಿ ಒಂದು ಹೊರಬಿದ್ದಿದೆ ಅಲ್ಲವೇ?

ಅದಕ್ಕೇ ನವೀನ ಗಾದೆಯಲ್ಲಿ, ಹಲ್ಲೂ ಇತ್ತು; ಕಡಲೆಯೂ ಇತ್ತು! ಆದರೆ ಹಸಿವೇ ಇತ್ತಿಲ್ಲ!! ಅನ್ನಕ್ಕಾಗಿ ಹಸಿವು ಹಾತೊರೆಯುತ್ತಿತ್ತು!!!

ಒಂದು ಸಲಹೆ

"ಹಚ್ಚ ಹಸುರಿನ ಬಯಿಲು. ಅಲ್ಲಲ್ಲಿ ನೆರಳು ನೀಡುವ ಹಿರಿಯ ವೃಕ್ಷಗಳು. ಷಹರಿನವರೆಲ್ಲಾ ಸಾಯಂಕಾಲ ಅಡ್ಡಾಡಲು ಬರುವ ಸ್ಥಳ. ಇಂತಹ ಕಡೆ ವಸ್ತುಪ್ರದರ್ಶನ ನಡೆಸಿದರೆ ಜನ ಜಂಗುಳಿ ಹೆಚ್ಚಾಗಿ ಹಣ ಸಂಪಾದನೆ ಮಿತಿಮೀರಿ, ಯಾವುದಾದರೂ ಒಂದು ಧರ್ಮ ಕಾರ್ಯಕ್ಕೆ ವಿನಿಯೋಗವಾಗಬಹುದು. ಅದಕ್ಕೇ ಕಬ್ಬನ್ ಪಾರ್ಕಿನಲ್ಲಿ ಅಸ್ಸಾಂ ಪರಿಹಾರ ನಿಧಿಗೆ ವಸ್ತುಪ್ರದರ್ಶನ" ಎಂದು ಒಬ್ಬರು ವಿಶದೀಕರಿಸಿದರು.

ಬಲ್ಸೊಗಸು ಅವರು ಅಂದ ಮಾತು. ಅವರಂದಂತೆಯೇ ಅಲ್ಲಿ ಜನ ಬಾಹುಳ್ಯ ಹೆಚ್ಚಾಗಿತ್ತು. ಹೇರಳವಾಗಿ ಹಣವೂ ಬಂದಿದ್ದಿರಬೇಕು. ಇದನ್ನು ನೋಡಿದ ಮೇಲೆ ನನಗನ್ನಿಸುತ್ತೆ! 'ವಾರೇ! ಷೇರ್'. ಒಂದು ಸಾರ್ವಜನಿಕ ಯೋಜನೆ ಮಾಡಬೇಕಾದರೆ ಹೀಗೆ ಮೂಲ ಭೂತ ವಿಚಾರಗಳನ್ನು ನಾವು ಮನನಮಾಡಿ ಆಮೇಲೆ ಕೆಲಸ ಮಾಡಿದರೆ ಚೆನ್ನ. ಈಗನಕ ಕಬ್ಬನ ಬನದಲ್ಲಿ ವಸ್ತುಪ್ರದರ್ಶನವಾಯ್ತು, ಪ್ರದರ್ಶನ ಮುಗಿಯುವ ಹೊತ್ತಿಗೆ ಹಚ್ಚ ಹಸುರಿನ ಬಯಿಲು ಸಹಾರಾದಂತೆ ಆಗಿರುತ್ತದೆ. ಹಿರಿಯ ವೃಕ್ಷಗಳು ಬೋಳು ಬೋಳಾಗಿ ಭಟ್ಟ ತಲೆಯಿಂದಿರುತ್ತವೆ, ಈ ಜಾಹೀರಾತು ಬೋರ್ಡುಗಳನ್ನು ಹೊತ್ತೂ ಹೊತ್ತೂ. ಅಂದಮೇಲೆ ಇಲ್ಲಿ ಅಡ್ಡಾಡಲು ಯಾವ ಷಹರಿನವರೂ ಇಲ್ಲಿಗೆ ಬರುವುದಿಲ್ಲ. ಅಂದರೆ ಮುಂದಿನ ವಸ್ತುಪ್ರದರ್ಶನ ಎಲ್ಲಿಮಾಡಬೇಕು ಎನ್ನುವ ಪ್ರಶ್ನೆ ಸ್ವತಃ ಸಿದ್ಧ.

ಅದಕ್ಕೆ ನಾಗರೀಕರಾದ ನಾವು ಈಗಿನಿಂದಲೇ ಯೋಜನೆ ಮಾಡಿ ಉತ್ತರ ಕಂಡುಹಿಡಿಯಬೇಕು. ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯ ಸಹಕಾರ ನೀಡಬೇಕು.

ಅದೇ ಪ್ರಯತ್ನ ಈ ಲೇಖನ.

ಮುಂದಿನ ವಸ್ತುಪ್ರದರ್ಶನವನ್ನು ಎಲ್ಲಿ ಮಾಡಬೇಕು?

ಹಚ್ಚ ಹಸುರಿನ ಬಯಲು, ಕೆಚ್ಚಿನ ಮರಗಳು, ಸುಂದರ ವಾತಾವರಣ, ಜನರು ಅಡ್ಡಾಡಲು ಬರುವ ವನ. ಇಷ್ಟೂ ಬೇಕೇ ಬೇಕು.

ಅಂದರೆ ಸದ್ಯಕ್ಕೆ ನಮಗೆ ದೊರೆಯುವ ಜಾಗ ಲಾಲ್‌ಬಾಗ್.

ಟೀಪೂಸುಲ್ತಾನನ ಕಾಲದ ವನ. ಅಷ್ಟೇ ಕೆಚ್ಚಿನ ಮರಗಳು, ಹಚ್ಚ ಹಸುರಿನ ಬಯಲುಗಳು. ಅಲ್ಲಿಡಬೇಕು ಮುಂದಿನ ವಸ್ತುಪ್ರದರ್ಶನ. ಬಂದವರೆಲ್ಲಾ ತಮ್ಮ ಜ್ಞಾನ ಭಾಂಡಾರವನ್ನು ಹೆಚ್ಚಿಸಿಕೊಳ್ಳುವುದು ಹಾಗಿರಲಿ! ತಮ್ಮ ಕಲೋಪಾಸನೆಗೆ ತಾಣ ದೊರಕಿಸಿಕೊಳ್ಳುವುದು ಹಾಗಿರಲಿ! ಬಳಲಿ ಬೇಸತ್ತು ಸುತ್ತಿ ಸುಸ್ತಾದಾಗ, ಈ ಹಚ್ಚ ಹಸಿರಿನ ಮೇಲೆ ನಡೆದು ಕಾಲಿಗೆ ತಂಪುಮಾಡಿಕೊಳ್ಳಲಿ, ಕೆಚ್ಚಿನ ಮರಗಳನ್ನು ನೋಡಿ ಅವುಗಳಮೇಲಿರುವ ಜಾಹೀರಾತು ಬೋರ್ಡುಗಳನ್ನು ನೋಡಿ ಆನಂದ ಪಡಲಿ. ಇವುಗಳೆಲ್ಲವನ್ನು ನೋಡಿದ ಮೇಲೆ ತಮ್ಮ ತಮ್ಮ ಮನೆಯ ತುಳಸಿ ಕಟ್ಟೆ ಎಷ್ಟು ಚೆನ್ನು ಎಂದು ಹಿರಿಹಿಗ್ಗಲಿ

ಆಯಿತು! ಮುಂದಿನ ವಸ್ತುಪ್ರದರ್ಶನ ಲಾಲ್‌ಬಾಗಿನಲ್ಲಿ ನಡೆದರೆ ಆಮೇಲೆ ಅಲ್ಲಿ ಏನೂ ಮಾಡುವಂತಿಲ್ಲ ಅಲ್ಲವೇ! ಅಲ್ಲಿ ಸೈಟುಗಳನ್ನು ಮಾಡಿ ಮನೆ ಕಟ್ಟಿಸಲು ಕೊಟ್ಟರೆ, ಕೋಟ್ಯಾಂತರ ರೂಪಾಯಿ ಲಾಭ ಬರುತ್ತೆ. ಅದನ್ನು ನಮ್ಮ ಸಂಸ್ಕೃತಿಯ ಹಿರಿಮೆಗಾಗಿ. ನಮ್ಮೂರಿನ ನಿಸರ್ಗ ಸೌಂದರ್ಯವನ್ನು ಹೆಚ್ಚಿಸಲು ಉಪಯೋಗಿಸಿಕೊಳ್ಳಬಹುದು ಅಲ್ಲವೇ?

ಆದರೆ ಮುಂದಿನ ಪ್ರದರ್ಶನ!

ಅಂದವಾದ ಹಚ್ಚ ಹಸುರಿನ ಇನ್ನೊಂದು ವನವಿರುವುದು ಅರಮನೆ. ಅದಿನ್ನು ನಮ್ಮ ಅಂದರೆ ಸಾರ್ವಜನಿಕರ ಪೂರ್ಣ ಹತೋಟಿಗೆ ಬಂದಿಲ್ಲ. ಆದರೇನು ಪ್ರಜಾಯುಗ, ಪ್ರಜೆಗಳ ಆಕಾಂಕ್ಷೆಯಂತೆ, ಎಲ್ಲವೂ ನಡೆಯುವ ಕಾಲ. ಸಾರ್ವಜನಿಕರ ಹಿತಕ್ಕಾಗಿ, ಅವರ ಜ್ಞಾನಾರ್ಜನೆಗಾಗಿ ಒಳ್ಳೆಯ ಕೆಲಸಕ್ಕಾಗಿ ವಸ್ತುಪ್ರದರ್ಶನ ಮಾಡುತ್ತೇವೆ, ಎಂದರೆ ಯಾರು ತಾನೇ ಬೇಡ ಅಂತ ಧೈರ್ಯವಾಗಿ ಹೇಳ್ತಾರೆ?

ಅರಮನೆಯ ಸುಂದರ ಬನಗಳಲ್ಲಿ ಮೂರನೆ ವಸ್ತುಪ್ರದರ್ಶನ. ಅಲ್ಲಿಗೆ ನಮ್ಮೂರಿನಲ್ಲಿ ವಸ್ತುಪ್ರದರ್ಶನಗಳನ್ನು ಏರ್ಪಡಿಸುವ ಆಸೆ ಮುಗಿದಂತೆಯೇ! ಏಕೆಂದರೆ ಇರುವ ದೊಡ್ಡದೊಡ್ಡ ವನಗಳೆಲ್ಲಾ ಮುಗಿದು ಹೋಗಿರುತ್ತವೆ.

ಆಗ, ದೊಡ್ಡ ಆಸ್ಪತ್ರೆಗಳ ದೊಡ್ಡ ದೊಡ್ಡ ವನಗಳು ಮೈಸೂರು, ಬೃಂದಾವನ, ನಂದಿ ಹೀಗೆ ಕೆಲವಾರು ವರ್ಷ ನಡೆಸಬಹುದಲ್ಲವೆ?

—ಕುಮಾರ್.

ನಶ್ಯದ ಡಬ್ಬಿ

ಎಂಥ ರೇಷನ್ ಕಾಲ ಬಂದರೂ, ರೇಷನ್ನಿಗೇನೇ ಕಾಲ ಬಂದರೂ, ಈ ಊರಲ್ಲಿ ನನಗೆ ಒಬ್ಬರ ಮನೆಯಲ್ಲಿ ತಟ್ಟೆ ತುಂಬ ಅನ್ನ, ಬಟ್ಟಲು ತುಂಬಾ ಖೀರು ಸಿಕ್ಕೇ ಸಿಕ್ಕುತ್ತೆ, ಅಂದ ಶೀನು ರೈಲಿಳಿದಾಗ. ನನ್ನ ಸಾಮಾನುಗಳಿಗಾಗಿ ಹೊಂಚು ಹಾಕುತ್ತಿದ್ದ ನಾಲ್ಕಾರು ಗೃಧ್ರಾಗಳನ್ನು ತಡೆದು ನಿಲ್ಲಿಸಿ, ಅಲ್ಲೇ ಒಂದು ಕಂಬಕ್ಕೊರಗಿದೆ. ಶೀನೂನೂ ನನ್ನ ಪಕ್ಕಕ್ಕೆ ಬಂದ, ಕೈಚೀಲಸಹಿತ. ಅವನೂ ಆ ಪೋರ್ಟರುಗಳನ್ನ ಆಚೆಗಟ್ಟಿದ. ನಾಲಗೆ ಚಪ್ಪರಿಸಿಕೊಂಡು ನನ್ನ ಅಸೂಯೆ ಕೆರಳಿಸಿದ. "ಕೇಳೋ ಇಲ್ಲಿ, ಪೂರ್ತಿ ಕಥೇನ" ಎಂದು ಪ್ರಾರಂಭಿಸಿಯೇಬಿಟ್ಟ, ತನ್ನ ಪುರಾಣಾನ. ಎಷ್ಟೇ ಸಂಕ್ಷೇಪವಾಗಿ ಅವಧರಿಸಿದರೂ, ಅವನ ಶ್ರವಣಕ್ಕೆ ಅರ್ಧ ಗಂಟೆಯಾದರೂ ಬೇಕಾಗುತ್ತದೆ ಎಂದು ಗೊತ್ತಿದ್ದರಿಂದ ನಾನು ಮೂಕನಾದೆ. ನನ್ನ "ಮೂಕಂ" ಅವನನ್ನು "ವಾಚಾಲಂ" ಮಾಡಿತು.

"ಈ ಊರಲ್ಲಿ ಇಃಸ್ಪೆಕ್ಟರಿದಾನಲ್ಲಾ ಚಂದ್ರು, ಅವನೂ ನಾನೂ ಸಹ ಗೋಲೀ ಕ್ರೀಡಾತುರರಾಗಿದ್ದೆವು ಅಂದರೆ, ಅರ್ಥವಾಯಿತೇನಯ್ಯ? ಚಂದ್ರುಗೆ ಸಂಗೀತ ಅಂದ್ರೆ ಪ್ರಾಣ; ಅವನ ಮುತ್ತಾತ ವೈಣಿಕ ಚೂಡಾಮಣಿ ವೆಂಕಪ್ಪನ ಮೊಮ್ಮಗ; ಹುಟ್ಟುತ್ತಲೇ ರಾಗ ತಾಳ ಪ್ರವೀಣ; ಬೆಳೆಯುತ್ತಲೇ ಮೂರ್ಛನಾಲಂಕಾರ. ಸರಿ. ಮದುವೆ ವಯಸ್ಸು ಬಂತು. ಅವನ ಅಪ್ಪ ಹೆಣ್ಣು ಹುಡುಕುವುದರಲ್ಲಿ ನಿಸ್ಸೀಮ. ಎರಡು ಕಡೆ ನೋಡಿದ. ಅನುಕೂಲವಾದ ಜಾಗ ಅಂತ ಎರಡನ್ನೂ ಚಂದ್ರು ಮುಂದಿಟ್ಟ." (ನಾನು ಆಕಳಿಸಿದೆ).

ಚಂದ್ರು ಒಳ್ಳೇ ವರ ಅನ್ನು. ೧೬೫ ಪೌಂಡು ತೂಕ, ಐದೂ ಮುಕ್ಕಾಲಡಿ ಎತ್ತರ, ಪದವೀಧರ, ಬ್ರಾಹ್ಮಣನಾದರೂ ಹೆಂಡದ ಇಲಾಖೆಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದ. ಹುಳಿ ನೋಡುವುದರಲ್ಲಿ ಅವನ ಮೂಗು ಮೂರು ಡಿಸ್ಟ್ರಿಕ್ಟ್‌ಗಳಲ್ಲಿ ಪ್ರಸಿದ್ಧಿ. (ನಾನು ಹಿಂದಲೆ ಕೆರೆದೆ)

ಇಬ್ಬರೂ ೩೦೦೦ ವರದಕ್ಷಿಣೆಗೆ ಸಿದ್ಧ; ಜೊತೆಗೆ ಗ್ಯಾಬರ್ಡೀನ್ ಸೂಟು, ಪೈಲಟ್ ರೋಡಿಯೊ, ಲೇಡಿಸ್ಮಿತ್ ವಾಚು, ಉಂಗುರ ಉತ್ತರೀಯ ಇತ್ಯಾದಿ

ಮಾಮೂಲಿನಂತೆ. ಆದರೆ, ಚಂದ್ರುವಿಗೆ ದೇವ ಮನೋಹರಿ ಕಂಡರೆ, ಅಲ್ಲ, ಕೇಳಿದರೆ ಖುಷಿ. ಅವರಿಬ್ಬರ ವೈಕಿ ಲಾಯರ ಮಗಳಿಗೆ ಆ ರಾಗ ಬರುತ್ತಿರಲಿಲ್ಲ. ಅವಳಪ್ಪನ ಕಿವಿ ಕೊಂಚ ಹಿಂದೋಳನದ ಕಡೆ; ಎಷ್ಟಾದರೂ ಹಿಂದಿನ ಕಾಲ ದವರು. ದೇವಮನೋಹರಿಗೆ ಇಂಜಿನಿಯರ್ ಮಗಳೇ ಎತ್ತಿದ ಕೊರಳು. ಆದರೆ, ಚಂದ್ರು ಅಪ್ಪ ಅವನನ್ನು ಇಂಜಿನಿಯರ್ ಮಗಳ ಕೈಹಿಡಿಯುವಂತೆ ಬಲವಂತಪಡಿಸಿದ (ನಾನು ಕಣ್ಣುಸನ್ನೆ ಮಾಡಿ ಒಬ್ಬ ಪೋರ್ಟರನ್ನು ಕರೆದೆ).


ಉಭಯ ಸಂಕಟ. ಚಂದ್ರು ನನ್ನ ಹತ್ತಿರ ಬಂದ. ಏನು ಮಾಡೋದೋ ಅಂದ, ಅಂಗಲಾಚಿ. ಇಬ್ಬರು ಹುಡುಗಿಯರಿಗೂ ಬೇರೆ ಬೇರೆ ಸಂಗೀತದ ಮಾಸ್ತರುಗಳು ನಾನಂದೆ, "ಲಾಯರ್ ಮನೆ ಮಾಸ್ತರನ್ನ ಇಂಜಿನಿಯರ್ ಮನೆಗೆ ಗೊತ್ತುಮಾಡಿಸಿ, ಅವಳಿಗೂ ದೇವಮನೋಹರಿ ಕಲಿಸಿದರೆ ಆಯಿತು" ಅಂತ. ಆದರೆ, ಆಗಲೇ ಪಾಠ ಹೇಳುತ್ತಿದ್ದ ತಮ್ಮ ಮನೆ ಮಾಸ್ತರನ್ನ ಇಂಜಿನಿಯರ್ ಹೇಗೆ ಹೊರದೂಡಿಯಾರು, ಎಂಬುದು ಸಮಸ್ಯೆ. (ಪೋರ್ಟರ್‌ನನ್ನ ಹೋಲ್ಡಾಲನ್ನು ತಲೆಗೇರಿಸಿದ ವಿಷಯ ಶೀನುವಿಗೆ ತಿಳಿಯಲೇ ಇಲ್ಲ).

ಅದಕ್ಕೆ ನಾನೇ ಉಪಾಯ ಹೇಳಿಕೊಟ್ಟೆ. ಆ ಮಾಸ್ತರ್ ನಶ್ಯಸೇವಕ. ಆಸ್ಥಾನದಿಂದ ದಂತದ ಡಬ್ಬಿ ಬೇರೆ ಬಂದಿತ್ತು ಅವರಿಗೆ. ಇಂಜಿನಿಯರಿಗೆ ಇಸ್ಪೀಟಿನ ಚಟ ಹೊತ್ತಿಸಿದೆ, ಓವರ್‌ಸಿಯರುಗಳ ಮೂಲಕ. ಇಸ್ಪೀಟಿಗೆ ಕೂತಾಗ, ಪಕ್ಕದಲ್ಲೇ ನಶ್ಯ ಇರಿಸಿದೆ. ಹಾಗೆಯೇ, ಕೈ ಅತ್ತಲಾಗೆ ಆಡಿ ಆಡಿ, ಆರು ತಿಂಗಳಲ್ಲಿ "ಕೈಗೆ ಬಂದದ್ದು ಮೂಗಿಗೇರಿತು"; ಮೂಗಿಗಿಂತ ದೊಡ್ಡದಾದ ಒಂದು ಡಬ್ಬೀನೂ ಕೊಂಡುಕೊಂಡರು. ನಂತರ, ಕಂಟ್ರಾಕ್ಟರೊಬ್ಬರ ಮೂಲಕ ಇಂಜಿನಿಯರಿಗೂ ಒಂದು ದಂತದ ಡಬ್ಬಿ ಕೊಡಿಸಿದೆ, ಆಸ್ಥಾನದಿಂದ ಮಾಸ್ತರಿಗೆ ಬಂದಿತಲ್ಲಾ, ಅದರ ಹಾಗಿನದು. (ಶೀನುವಿನಿಂದ ತಪ್ಪಿಸಿಕೊಂಡು ಓಡಿ ಹೋಗಲು ನಾನು ಉದ್ಯುಕ್ತನಾದೆ).

ಇಷ್ಟು ಮಾಡಿದ ಮೇಲೆ, ಒಂದು ಭಾನುವಾರ ಪಿತೂರಿ ಹೂಡಿದೆ. ನನ್ನ ಪ್ಲಾನ್ ಏನು ಅಂದ್ರೆ, ಸಂಗೀತದ ಮಾಸ್ತರ ಡಬ್ಬೀನ ಅಥವಾ ಅದರೊಳಗಿಂದ ನಶ್ಯಾನ ಇಂಜಿನಿಯರ್ ಕದಿಯಬೇಕು, ಅದನ್ನು ಕಂಡು ಮಾಸ್ತರ್ ರೇಗಬೇಕು, ಥತ್, ಈ ಮನೆಗೆ ಇನ್ನು ಬರೋಲ್ಲಾಂತ ಅವರು ಪಾಠ ಬಿಡಬೇಕು, ಆಗ ದೇವಮನೋಹರಿ ಮಾಸ್ತರನ್ನ ಅವರಿಗೆ ಶಿಪಾರ್ಸು ಮಾಡಬೇಕು, ಅವರು ಆ ಹುಡುಗಿಗೆ ಆ ರಾಗ ಕಲಿಸಬೇಕು, ಹಿಂದೋಳಕ್ಕೆ ಅಪ್ಪ ಮೆಚ್ಚಿ, ದೇವಮನೋಹರಿಗೆ ಮಗ ಮೆಚ್ಚಿ, ಚಂದ್ರುಗೆ ವರದಕ್ಷಿಣೆ ವಧು ಎರಡೂ ದಕ್ಕಬೇಕು ಅಂತ. (ನಾನು ಕಂಬಿ ಕಿತ್ತೆ; ಶೀನು ಕಂಬದೆದುರು ನಿಂತು ಕತೆ ಹೇಳುತ್ತಲೇ ಇದ್ದ.)

ಆ ಭಾನುವಾರ ನಾನು ಈ ಊರಿನ ನಶ್ಯದಂಗಡಿ ಮಾಲೀಕರು ಮೂವರನ್ನೂ ನದೀ ಸ್ನಾನಕ್ಕೆ ನಂತರ ವನ ಭೋಜನಕ್ಕೆ ಅಂತ ಆಹ್ವಾನಿಸಿ ಬೇರೆ ಊರಿಗೆ ಸಾಗಿಸಿ, ಅಲ್ಲಿಂದ ಹಿಂದಕ್ಕೆ ಬರೋ ರೈಲು ತಪ್ಪಿಸಿದೆ. ನಾನು ಮಾತ್ರ ಓಡೋಡಿ ಡಬ್ಬಿ ಹತ್ತಿ ಊರಿಗೆ ಬಂದೆ. (ಹಿಂತಿರುಗಿ ನೋಡಿದೆ; ಯಾರೋ ನರ್ಸೋಟ್ಬರು ಅವನನ್ನು ಮೆಲ್ಲಗೆ ಹಿಡಿದು ಸಾಗಿಸಿದರು. ಶೀನುವಿಗೆ ಹುಚ್ಚಿಂಬುದು ನನಗೆ ಆಗ ಖಂಡಿತವಾಯಿತು).

— ಪಾಟಾಳಿ.



ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್ ಪಡೆದಿರುವರು ಮಾತ್ರ ಡ್ರಿಲ್ಲಿಗೆ ಬಂದಿದ್ದೀರ, ಮಿಕ್ಕವರೆಲ್ಲಾ ಎಲ್ರೋ??

ಶೂರ ಸೂರ

[ಸೂರಪ್ಪನ ಮನೆ. ೧೯೪೨ರ ಚಳುವಳಿ ಕಾಲ. ದುಡಿ ಯಾ ಮಡಿ ಎಂಬ ಬಾಪು ಸಂದೇಶ ಹೊತ್ತು ದುಡಿಯಲು ತರುಣ ತಂಡ ತೊಡಗಿದ ಕಾಲ. ಸೊಂಭೇರಿ ಸೂರಪ್ಪ-ಹೊಟ್ಟೆಬಾಕ ಸೂರಪ್ಪ ತಾನೂ ಚಳುವಳಿಗೆ ಸೇರುವೆನೆಂದೂ ಅದಕ್ಕೆ ತರಪೇತು ತಾಯಿ ಮತ್ತು ಮಡದಿ ಕೊಡಬೇಕೆಂದು ಕಾಡುತ್ತಿರುವನು.]

ಸೂರಪ್ಪ :—(ಪರದೆ ಎದ್ದಾಗ ಕೂತ ಕುರ್ಚಿಯಿಂದ ಧಡೀರ್ ಎಂದು ಎದ್ದು—ನೇರವಾಗಿ ರಂಗದ ಮುಂದೆ ಬಂದು ಬಲಗೈ ಎತ್ತಿ ಆಕಾಶದೆಡೆಗೆ ತೋರಿಸುತ್ತಾ........] ಅದೊ ನೋಡು! ತಾಯಿ! ಅದೊ ನೋಡು—ಕೇಳುತಿದೆ . ಕ್ರಾಂತಿಯ ಕಹಳೆ! ದುಡಿ... ಯಾ... ಮಡಿ....ಎಂತಹ ಸಂದೇಶ ಹೆತ್ತ ತಾಯೀ.... ಕಳಿಸೆನ್ನ ಕಾಳಗಕೆ. ಪರದಾಸ್ಯ ಶೃಂಗಲೆಯ ಕಿತ್ತೊಗೆದು ಸ್ವತಂತ್ರ ಪತಾಕೆಯ ಏರಿಸುವೆ ಹಾರಿಸುವೆ....ತಾಯೆ....ಅಮ್ಮಾ....ಶಕ್ತಿಕೊಡು—ದೇಹದಲಿ ಹೊಸ ರಕ್ತ ಹರಿದು ಚಿಮ್ಮಿ ಭಾರತ ಮಾತೆಯ ಚರಣದಲಿ ಚೆಲ್ಲಲು ಶಕ್ತಿ ಕೊಡು .. ....

ತಾಯಿ :—ಮಗುವೆ! ಮೊದಲಿಂದ ಮುದ್ದಿನಲಿ ಬೆಳೆದ ನೀನು ಕಾಳಗಕೆ ನುಗ್ಗುವುದೆ?

ಮಡದಿ :—ಈ ಮಾತಿಗೇಕೆ ಮೇಲುಕೋಟೆಯ ನಾವು....ನಾ ಕಾಣೆನೆ ಇವರ ದೇಶ ಭಕ್ತಿ. ಪೋಲೀಸರನು ಕಂಡರೆ ಪರಾರಿಯಾಗುವ ಪ್ರಿಯರಿವರು.

ಸೂರ :—ಮಾತಾಡದಿರೇ ಹೇ ಮಾವನ ಮಗಳೆ. ಮೂಡುತಿಹ ದೇಶ ಪ್ರೇಮ ನಾಶ ಮಾಡಲು ಬೇಡ ...ಹೂಂ— ನಿನ್ನ ಮಾತೇನು. ಮಾತೆ! ಶಕ್ತಿ ಕೊಡು.

ತಾಯಿ :—ಏನು ಶಕ್ತಿಯ ಕೊಡಲಿ ಕಂದ—ನನ್ನ ಆಶಿರ್ವಾದ ನಿನ್ನ ತಲೆಯಲ್ಲಿಹುದು ...ಅದುವೆ ಶಕ್ತಿ, ಹೋರಾಡಿ ಬಾ.

ಮಡದಿ :—ಬರಿಯ ಆಶೀರ್ವಾದವಿದಲ್ಲ ಅತ್ತೆಮ್ಮ ಏನೋ ಕುತಂತ್ರ ಕಾಣು ತಿದೆ ಇವರ ಕಣ್ಣಲ್ಲಿ.

ಸೂರ :—ದೇವ! ಹೇಗೆ ತೋರಿಸಲಿ ನನ್ನ ನಿಜ ದೇಶ ಭಕ್ತಿಯ ಈ ಮೂರ್ಖ ಳಿಗೆ ಎದೆ ಸೀಳಿ ನೋಡೇ ಹೇ ಕೊಂಕು ಮಾತಿನವಳೆ—ಅಲ್ಲಿ ಕಂಡೀಯ ನನ್ನ ಭಾರತಮಾತೆಯ ಚಿತ್ರ.

ಮಡದಿ :—ಮಾಲೆ ಹಾಕುವ ಮುನ್ನ ಎದೆ ಸೀಳಬೇಕಿತ್ತು—ಕಾಣುತ್ತಿದ್ದೆನು ಅಲ್ಲಿ ಶೂನ್ಯ ಬುದ್ಧಿಯ ಸೋಂಭೇರಿಯ ಚಿತ್ರ.

ಸೂರ :—ಎಲ್ಲಿ ಮೀರಿತು ಮಾತೆ! ಇವಳ ಹಲ್ಲು ಮುರಿದೇನು—ಮೂಳೆ ಮುರಿದು ಪುಡಿಮಾಡಿ ಕಳಿಸೇನು ಇವರಪ್ಪನ ಮನೆಗೆ—ಹೂಂ! ಈ ಮೂರ್ಖಳೊಡನೇನು ಮಾತು ಮಾತೆ ಶಕ್ತಿ ಕೊಡು.

ತಾಯಿ :—ಕಿತ್ತಾಡದಿರಿ ಮಕ್ಕಳಿರಾ... (ಅಳುವ ಧ್ವನಿಯಲಿ)....ಅವರಿದ್ದ ಕಾಲ ದಲಿ ಏನೊಂದು ಹಸನಿತ್ತು....ಮಗುವೆ ನಿನ್ನ ನೋಡಲು ನನ್ನ ಬಿಟ್ಟು ತೆರಳಿದರು ಪರಲೋಕ ಯಾತ್ರೆಗೆ....ಅವರ ಮಗನೀನು... ಈ ಹೋರಾ ಟಕೆ ತೊಡಗಿರುವಿ....

ಸೂರ :—(ಮಧ್ಯೆ ಬಾಯಿಹಾಕಿ) ಸಿಂಹದುದರಲ್ಲಿ ಹುಟ್ಟಿದ ಈ ಶಿಶು ಸಿಂಹ ನಾಗಲೆ ಬೇಕಷ್ಟೆ—ತಾಯಿ! ಶಕ್ತಿ ಕೊಡು ಸೀಳುವೆನು ಫಿರಂಗಿಯರ, ಬಡಿಯು ವೆನು ಬ್ರಿಟಿಷರ ...

ಮಡದಿ :—ಇದಕ್ಕೆಲ್ಲ—ಶಕ್ತಿ ಬೇಕು ...ಯುಕ್ತಿ ಬೇಕು....ಮನೆಯಲ್ಲಿ ಆ ಮುದುಕಿಯ ಮುಂದೆ—ಈ ಮಡದಿಯ ಮುಂದೆ ಬಡಿದುಕೊಂಡರಾಯ್ತೆ ಕಡಲ ನೀರಿಗೆ ಬಡಿದಾಡಿದಂತೆ. ದೇಶವುಂಟು--ನೀ ಉಂಟು ಹೋಗಿ ಕ್ರಾಂತಿಯಲಿ ಕಾಲಿಡಲು ಶಕ್ತಿಯನು ಅತ್ತೆಯವರು ಕೊಡಬೇಕೆ?— ನಿಮ್ಮ ರಟ್ಟೆಯ ಬಲವ ನೀವರಿಯರಾಗಿ.

(ಹೊರಗಡೆ ಜೈಕಾರ—ವಂದೇ ಮಾತರಂ—ಗಾಂಧಿಕೀ ಜೈಗಳು ಕೇಳಿಬರುತ್ತಿದೆ.)

ಸೂರ :—ಕೇಳಿದೆಯಾ ಹೇ! ಕೋಮಲಾಂಗಿ ಕ್ರಾಂತಿಯ ಕಹಳೆ. ಕಳುಹೆನ್ನ ಕಾಳಗಕೆ ಹೆತ್ತಮಾತೆ.

ಮಾತೆ :—ವಿಜಯೀ ಭವ—ಜಯಶೀಲನಾಗಿ ಬಾ ಕಂದ.

ಸೂರ :—ತಾಯಿ ! ಭೀಮ ತಾ ಜರಾಸಂಧನ ಸೀಳು ಪ್ರೊಡೆ ಕುಂತಿ ಇತ್ತಿದ್ದ ಳವಗೆ ಮುದ್ದೆ ನವನೀತವಂ. ಶ್ರೀ ರಾಮ ತಾ ಶಿವಧನುವ ಮುರಿಯಲು ಕೌಸಲೆ ಯಿತ್ತ ಕೆನೆಹಾಲೇ ಕಾರಣವಲ್ಲವೆ? ಹನುಮನು ತಾ ಕಡಲ ಹಾರಲು ಪಡೆದ ಶಕ್ತಿ ಅಂಜನಾ ತಾಯಿಯ ಅಕ್ಕರೆಯ ಭೋಜನವಲ್ಲದೆ ಮತ್ತೇನು ಮಾತೆ! ಅಲಿಸು ಆ ಅಂಗದನ ಅಂಗಬಲ ಅಂದು ಬಂದದ್ದು ಅವನಮ್ಮ ತಾರೆ ತಿನ್ನಿಸಿದ ತಿನಸೇ ಕಾರಣವಲ್ಲವೆ ?

ಮಡದಿ :—ಇದೇನು ಕಾರಣವೊ ಅತ್ತೆಮ್ಮ ಇವರ ಮಾತು ಬರಿತು ತಿಂಡಿ ತಿನುಸುಗಳ ಹಾಸುಹೊಕ್ಕೆ ಆಗಿರುವುದಲ್ಲ! .. ....

ಮಾತೆ :—ಮಗಳೆ ನಿನ್ನ ಪ್ರಿಯ ಪುರಾಣಪ್ರಿಯನೆಂಬುದನರಿಯೆಯಾ! ಹೋರಾಟಕೆ ಹೊರಡುವ ಮುನ್ನ ಧೀರವೀರರ ಕಥೆಯ ಸ್ಮರಿಸಿ ತೆರಳು ವುದೆಮ್ಮ ಆರ್ಯ ಧರ್ಮವಲ್ಲವೆ?

ಸೂರ :—ನಿಜವನಾಡಿದೆ ತಾಯಿ-ಹೊರಡುವೆನು ನಾನಿನ್ನು-ತಾಬೇಗ ತಿನುಸು ತುಂಬಿದ ತಾಟು. ತಿನ್ನುವೆನು ತೆರಳುವೆನು ತೋಳನಂತೆ. ಗೋಧಿ ಹಲ್ವವ ಮಾಡು-ಬೆಣ್ಣೆ ಕಾಸಿದ ತುಪ್ಪ-ಈರುಳ್ಳಿ ಬದನೆಯ ಪಲ್ಯ-ಹುರಿ ಹುರಿ ಹುರಿ ತಾಯೆ ಸೊಂಡಿಗೆಯ ರಾಸಿಯ. ಬಾದಾಮಿಕಾಯ್ ಜಜ್ಜಿ ಹಲ್ವಕೆ ಹಾಕು-ಶೇವಿಗೆಯ ಪಾಯಸಕೆ ಕೇಸರಿಯ ಮರೆಯದಿರು-ಬಿದ್ದಿ ರಲಿ ಎರಡು ಏಲಕ್ಕಿ ಜೊತೆಗೆ. ಕೊಬರಿ ಉತ್ತುತ್ತಿಯ ಕರಿದು ಮೇಲೆ ಕಲ್ಸಕ್ಕರೆಯ ಬೆರಸಿ ಹೊಯ್ಯಿ ಹಾಲಿಗೆ ಅದನ-ಕದರಿ ಕುಡಿಯಲು ಕೊಡು ಮಾತೆ, ಶಕ್ತಿ ತಾ ತಾನಾಗೆ ತುಂಬುವು ಈ ರಟ್ಟೆಗಳಲಾಗ. ಇದುವೆ ತಿನಸನು ತಿಂದ ಆ ವೀರಾದಿ ವೀರರ ಗಂಡ ಕ್ಷತ್ರಿಯರ ಶತೃ ಶ್ರೀ ಪರಶುರಾಮ.

ತಾಯಿ :—(ಕುಸಿದು ಕುರ್ಚಿಗೆ ಬೀಳುತ್ತಾ) ಮನೆಯ ಮಾರಲಿಬೇಕು ಈ ಅದ್ಧೂರಿ ಆಹಾರಕ್ಕೆ ಮಗನೆ-ಕಂಠಿಸರ ಎರವಿಟ್ಟು ಎಂಟು ಲಡ್ಡಿಗೆ ತಿಂದವರುಂಟೆ-ಇದೆಯೆ ನಿನ್ನಯ ದೇಶಭಕ್ತಿ.

ಮಡದಿ :—ಹೇಳಲಿಲ್ಲವೆ ನಾನು-ಕುಹಕತನ ಕಾಣುತಿದೆ ಕಣ್ಣಲ್ಲಿ ಎಂದು.

ಸೂರ :—ಕ್ರಾಂತಿಯಲಿ ಕಾದದೊಡೆ ಇದ್ದೇನು ಸತ್ತೇನು! ಕಂಬಿ ಕೀಳಲೆ ಬೇಕು-ಅಂಚೆ ಆಫೀಸು ಸುಡಲೇಬೇಕು-ಬ್ರಿಟಿಷರನು ಬಡಿಯಲೆಬೇಕು-ಡುಡಿ-ಯಾ-ಮಡಿ ವಂದೇಮಾತರಂ....ಹೊಡಿಯಲು ಬಡಿಯಲು

ಶಕ್ತಿ ಬೇಕು–ಆ ಶಕ್ತಿಗೆ ನೀನು ಭುಕ್ತಿ ಕೊಡುಮಾತೆ. ಭುಕ್ತಿ ಇದ್ದೊಡೆ ಶಕ್ತಿ–ಶಕ್ತಿ ಇದ್ದೊಡೆ ಯುಕ್ತಿ, ಯುಕ್ತಿ ಇದ್ದೊಡೆ ಭಕ್ತಿ....

ಮಡದಿ :—ಇನ್ನೆಷ್ಟು 'ಕ್ತಿ' ಗಳಿವೆಯೋ ಹೇಳಿಬಿಡಿ....

ತಾಯಿ :—ಹುಚ್ಚೆ ಹಿಡಿಯಿತೆ ಏನೂ ಎನ್ನ ಮುದ್ದು ಕಂದಗೆ ಮಗಳೆ—

ಮಡದಿ :—ಪಿತ್ತವೇರಿರಬೇಕು, ನೆತ್ತಿಯಲ್ಲಿ ದ್ರಾಕ್ಷಿಕದಡಿದ ನೀರು ಇಳಿಸೀತು ಆ ಅಮಲ........

(ತಾಯಿ ಒಳಗೆ ಹೋಗಿ ಒಂದು ಲೋಟ ತಂದು ನೀರು ಹಾಕಿ ಒಂದಿಷ್ಟು ದ್ರಾಕ್ಷಿ ಅದರಲ್ಲಿ ಕದಡಿ ಸೂರನಿಗೆ ಕೊಡುವಳು)

ಸೂರ :—(ಆ ಲೋಟ ಹಿಡಿದು) ಹ ಹ ಹ ತಾಯೆ! ಕಡುಬಿಳಿಯುವ ಗಂಟಲೋಳ್ ಪೀರಂ ಸುರಿದಂತಾಯ್ತು. ನನಗೇನು ಹುಚ್ಚಲ್ಲ...ದೇಶ ಪ್ರೇಮದ ಅಮಲು ಹತ್ತಿಹುದು ನೆತ್ತಿಗೆ-ಆ ಅಮಲು ಆರಿಸಲು ಶಕ್ತಿ ಬೇಕು....ತಾಯೆ ತಾಟು ತಾ !?....

ತಾಯಿ :—ಮಗಳೆ!-ಇರುವನೊಬ್ಬಮಗ ಆವನ ಮನದಿಂಗಿತವ ನಡೆಸಿ ಬಿಡುವಾ! ಹೋಗು ಬಗೆ ಬಗೆಯ ತಿನಿಸನು ಮಾಡಿ ಬಡಿಸೆನ್ನ ಕಂದನಿಗೆ-

ಸೂರ :—ಧನ್ಯ-ಧನ್ಯ ಮಾತೆ- ವೀರ ಮಾತೆ.

ಮಡದಿ :—ಮರುಳುಮಾಡದರಿವರು ಅತ್ತೆಮ್ಮನಿಗೆ....ಮನೆಯ ಆಸ್ತಿ ಕರಗಿದ್ದು ಇವರ ಲಂಬೋದರದ ಮಹಿಮೆಯೆ! ಈ ಉಳಿದಿರುವ ಕಂಠಿಸರ ಮಾರಿ ಉಣ್ಣಲು ಬಹುದೆ!

(ಹೊರಗಡೆ ಜೈ ಜೈಕಾರ)

ಸೂರ :— ಹೊತ್ತಾಯ್ತು ಹಸಿದಿಹೆನು........(ಪರದೆ)

ದೃಶ್ಯ ೨

(ಸೂರಪ್ಪನು ಚೆನ್ನಾಗಿ ತಿಂದು ಹೊಟ್ಟೆ ಹೊರಲಾರದೆ ಮಂಚದಮೇಲೆ ಒರಗಿರುವನು. ಮಡದಿ ಅವನ ಬಟ್ಟೆ ಬರೆ ಕಟ್ಟುತ್ತಿರುವಳು—ತಾಯಿ ನಿಂತಿರುವಳು....)

ಮಡದಿ :—ಹೊರಡಿ....ಹೊತ್ತಾಯ್ತು... ಕ್ರಾಂತಿಯ ಬಿಸಿ ಆರೀತು....ಕಂಬಿ ಕಿತ್ತಲು ಜೀಡಿ ರಣರಂಗದಿಂದ....

ತಾಯಿ : ಹೋಗಿ ಬಾ ಎನ ಕಂದ....

ಸೂರ :—ಉಂಡಬಾಯಿಗೆ ವಗ್ಗರಣೆಯಂತಿರಲಿ ತಾ ಕಾಳೆರಡು ಹುರಿಗಾಳ....

ಮಡದಿ :—ಹೊತ್ತೆಲ್ಲ ಇದರಲ್ಲೆ ಆಯ್ತು....

(ಸೂರಪ್ಪ ಎಷ್ಟು ಹೊತ್ತಾದರೂ ಏಳುವ ಚಿನ್ಹೆ ಕಾಣದಿರಲು ಬೇಸತ್ತ ಮಡದಿ ತಾಯಿ ಇಬ್ಬರೂ ಒಟ್ಟಿಗೇ)

ಮಡದಿ-ತಾಯಿ :—ಹೊರಡಬಾರದೆ ಹೇ ಹೊಟ್ಟೆ ಬಾಕ!

ಸೂರ :—ಹೊರಡುವೆನು....ಆದರೆ!!! ತಾಯೆ! ಕಾಯೆ!....ಹೊರಡುವೆನು ಹಾಗೆ ಹೊರಡುವುದೆಂತು? ಹೊಟ್ಟೆ ಭಾರ....ಹೊರಡುವೆ ರಾತ್ರಿ ಭೋಜನವ ಮುಗಿಸಿ ...

(ಎಂದು ಹೊದ್ದು ಮಲಗಿಬಿಡುವನು)

ಮಡದಿ :—(ತಲೆಮೇಲೆ ಕೈಹೊತ್ತು)-ನಾ ಹೇಳಲಿಲ್ಲವೆ ಕುತಂತ್ರವಿದೆಂದು—

ತಾಯಿ :—(ಕುಸಿದು ಕುಳಿತು) ರಾಮ ರಾಮ .. ಹಾ! ಶ್ರೀರಾಮ ರಕ್ಷೆ—

(ಪರದೆ ಬೀಳುವುದು)

—ದಾಶರಥಿ ದೀಕ್ಷಿತ್.



ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಬಿಡಿ ಪ್ರತಿ ಕೇವಲ ನಾಲ್ಕಾಣೆ


ವಾರ್ಷಿಕ ಚಂದಾ: ಕೇವಲ 3 ರೂ. ಗಳು (ಅಂಚೆ ವೆಚ್ಚ ಸಹಿತ)

ನಮ್ಮ ಹೊಸ ಮಾರಾಟಗಾರರು

ಎಫ್. ಎಸ್. ಸೋಪಿ,
ಅಲ್‌ನವಾರ್, ಬೆಲಗಾಂ ಡಿಸ್ಟ್ರಿಕ್ಟ್.

M/s. ಶ್ರೀ ಗಣಪತಿ ಸ್ಟೋರ್ಸ್,
ಹುಲಿಯಾರ್ : : ತುಮಕೂರು ಡಿಸ್ಟ್ರಿಕ್ಟ್.

ಕಿಕ್ಕಿರಿದ ಪ್ರೇಕ್ಷಕ ವೃಂದಕ್ಕೆ ಪ್ರದರ್ಶಿತವಾಗುತ್ತಿರುವ
ಏಕಮಾತ್ರ ಚಿತ್ರ !!



★★

ಎ. ವಿ. ಎಂ. ರವರ

ಒಂದು ರಾತ್ರಿ

(ತಮಿಳು)

★★

ಲಲಿತ, ನಾಗೇಶ್ವರರಾವ್, ಸರೋಜ, ರಾಮಸ್ವಾಮಿ,
ಬಾಲಯ್ಯ, ಪದ್ಮಿನಿ, ಕುಮಾರಿ ಕಮಲ

ಬೆಂಗಳೂರು ಸಾಗರ್ ಮತ್ತು ನ್ಯೂ ಅಪೇರಾ

ಮೈಸೂರು ಚಾಮುಂಡೇಶ್ವರಿ


ಕೆ. ಜಿ. ಎಫ್. ಕೃಷ್ಣ

ಮಂಗಳೂರು ಬಾಲಾಜಿ

ಟಾಕೀಸುಗಳಲ್ಲಿ ಈಗ ಪ್ರದರ್ಶಿತವಾಗುತ್ತಲಿದೆ.

A Tallam Release

ಈ ವರ್ಷದ ಅತ್ಯುತ್ತಮ ಚಿತ್ರ !



ಅಶ್ವಿನಿಯವರ

ಮಾಯಲಮಾರಿ

(ತೆಲುಗು)

ಅಂಜಲೀದೇವಿ, ನಾಗೇಶ್ವರರಾವ್, ಶಿವರಾವ್

ಮುಂತಾದವರ ಅಭಿನಯ

ಶೀಘ್ರದಲ್ಲಿಯೇ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ
ಪ್ರದರ್ಶಿತವಾಗಲಿರುವ ತಾರೀಖನ್ನು ಗಮನಿಸಿ.

★★

A Tallam Release.

Printed by B. S. Iyengar, Bangalore City
Publisher—B N. Gupta Editor—M Sivaram.